# ಪ್ರಂಗವ

अहर्निशं जागरणीयम् लोकहितं मम करणीयम्

ರಾಷ್ಟ್ರೀಯ ಜಾಗರಣ ಪತ್ರಿಕೆ




ಮಾದಕವ್ಯಸನಗಳ ಬಗೆಗೆ ಜಾಗೃತಿ ಮೂಡಿಸುವ ಸಲುವಾಗಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ಕರ್ನಾಟಕ ರಾಜ್ಯದ ಎಲ್ಲ ಕಾಲೇಜುಗಳಲ್ಲಿ ನಡೆಯಲಿರುವ 'ನಶಾಮುಕ್ತ ಭಾರತ' ಅಭಿಯಾನಕ್ಕೆ ಬೆಂಗಳೂರಿನಲ್ಲಿ ಫೆಬ್ರವರಿ 29ರಂದು ಚಾಲನೆ ನೀಡಲಾಯಿತು.

ಸಂಪುಟ : 36 ಸಂಚಿಕೆ : 14 ಜಯ-ಮಾಘ ಕಲಿಯುಗಾಬ್ದ 5116 15-2-2015 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

# ಹಿಂದು ಕೌಂಟ್ ಡೌನ್

## 2011ರ ಜನಗಣತಿ – ಶೇ. 78.35ಕ್ಕೆ ಕುಸಿದ ಹಿಂದು ಜನಸಂಖ್ಯೆ

2011ರ ಜನಗಣತಿಯ ಅಂಕಿಅಂಶಗಳನ್ನು ಈ ಹಿಂದೆಯೇ ಅಧಿಕೃತವಾಗಿ ಪ್ರಕಟಿಸಿದ್ದರೂ ಸಹ ಅದು ಅರೆಬರೆ ಮಾಹಿತಿ ಮಾತ್ರವಾಗಿತ್ತು. ಏಕೆಂದರೆ ಅಂದು ಕೇಂದ್ರದಲ್ಲಿ ಆಡಳಿತ ನಡೆಸುತ್ತಿದ್ದ ಮನಮೋಹನ್ ಸಿಂಗ್ ನೇತೃತ್ವದ ಸರಕಾರ ತನ್ನ ಹುಸಿ ಜಾತ್ಯತೀತ ನೀತಿಗನುಗುಣವಾಗಿ ಅನೇಕ ಅಂಶಗಳನ್ನು ಬಹಿರಂಗಗೊಳಿಸದೆ ಮುಚ್ಚಿ ಹಾಕಿತ್ತು. ಜನಗಣತಿಯ ಧಾರ್ಮಿಕ ಅಂಕಿಅಂಶಗಳ ಉಲ್ಲೇಖವೂ ಅವುಗಳಲ್ಲೊಂದು. ಏಕೆಂದರೆ ಈಗ ಮಾಧ್ಯಮಗಳಿಗೆ ಲಭ್ಯವಿರುವ ಮಾಹಿತಿಯ ಪ್ರಕಾರ 2001 ರಿಂದ 2011ರ ವರೆಗಿನ ಹತ್ತು ವರ್ಷಗಳ ಅವಧಿಯಲ್ಲಿ ದೇಶದ ಶೇಕಡಾವಾರು ಜನಸಂಖ್ಯೆಯಲ್ಲಿ ಹಿಂದೂಗಳ ಜನಸಂಖ್ಯೆ ಕುಸಿತವನ್ನು ಕಂಡಿದ್ದರೆ ಮುಸ್ಲಿಂ ಜನಸಂಖ್ಯೆ ಹೆಚ್ಚಳಗೊಂಡಿದೆ. ಇಂತಹ ಸ್ಫೋಟಕ ಮಾಹಿತಿ ಹಿಂದುಗಳನ್ನು ಚಿಂತನೆಗೆ ಹಚ್ಚಬಹುದೆಂಬ ಭಯದಿಂದ ಕಾಂಗ್ರೆಸ್ ನೇತೃತ್ವದ ಸರ್ಕಾರ ಹೀಗೆ ಅಂಕಿಅಂಶಗಳನ್ನು ಸಾರ್ವಜನಿಕಗೊಳಿಸಿರಲಿಲ್ಲ.




### ಹೊಸ ಮಾಹಿತಿ ತಿಳಿಸುವುದೇನು?

ಹತ್ತು ವರ್ಷಗಳ ಹಿಂದೆ ದೇಶದ ಒಟ್ಟಾರೆ ಜನಸಂಖ್ಯೆಯಲ್ಲಿ ಶೇ. 80.45ರಷ್ಟು ಪಾಲು ಹೊಂದಿದ್ದ ಹಿಂದು ಸಮಾಜ ಈಗ ಶೇ. 78.35ಕ್ಕೆ ತಗ್ಗಿದೆ. ಅಂದರೆ 2001ರಿಂದ 2011ರ ಅವಧಿಯಲ್ಲಿ ಭಾರತದ ಜನಸಂಖ್ಯೆಯಲ್ಲಿ ಹಿಂದುಗಳ ಪಾಲು ಶೇ. 2ರಷ್ಟು ಇಳಿಕೆಯಾಗಿದೆ. ಇದೇ ವೇಳೆ 13.4ರಷ್ಟಿದ್ದ ಮುಸ್ಲಿಂ ಜನಸಂಖ್ಯೆ 2011ರ ಹೊತ್ತಿಗೆ ಶೇ.14.2ಕ್ಕೆ ಏರಿದೆ. ಅಂದರೆ ದೇಶದ ಒಟ್ಟಾರೆ ಜನಸಂಖ್ಯೆಯಲ್ಲಿ ಮುಸಲ್ಮಾನರ ಪ್ರಮಾಣ ಶೇ. 0.8ರಷ್ಟು ಏರಿಕೆಯಾಗಿದೆ.

2011ರ ಜನಗಣತಿಯಂತೆ ದೇಶದ ಒಟ್ಟಾರೆ ಮುಸ್ಲಿಂ ಜನಸಂಖ್ಯೆ 17 ಕೋಟಿಯನ್ನು ಮೀರಿದೆ. ಹೀಗಾಗಿ ಭಾರತ ಜಗತ್ತನಲ್ಲಿ ಅತಿ ಹೆಚ್ಚು ಮುಸಲ್ಮಾನರನ್ನು ಹೊಂದಿರುವ ಮೂರನೇ ರಾಷ್ಟ್ರವಾಗಿದೆ. ಮೊದಲೆರಡು ದೇಶಗಳಾದ ಇಂಡೋನೇಷಿಯಾದ ಮುಸ್ಲಿಂ ಜನಸಂಖ್ಯೆ 20ಕೋಟಿ ಮೀರಿದ್ದರೆ, ಪಾಕಿಸ್ತಾನದಲ್ಲಿ 19 ಕೋಟಿಗೂ ಹೆಚ್ಚು ಮುಸಲ್ಮಾನರಿದ್ದಾರೆ. ಆದರೆ ಮೊದಲೆರಡು ರಾಷ್ಟ್ರಗಳು ಅಧಿಕೃತವಾಗಿ ಮುಸ್ಲಿಂ ರಾಷ್ಟ್ರಗಳೇ ಆಗಿವೆ. ಆದರೆ ಭಾರತ ಸಂವಿಧಾನಾತ್ಮಕವಾಗಿ ಯಾವುದೇ ಮತಪೋಷಕ ದೇಶವಲ್ಲ ಎಂಬುದು ಗಮನಾರ್ಹ.

### ಹಿಂದು ಜನಸಂಖ್ಯೆಯ ಸತತ ಇಳಿಕೆ

ದೇಶದ ಜನಸಂಖ್ಯೆಯಲ್ಲಿ ಹಿಂದುಗಳ ಪಾಲು ಕಳೆದ 50 ವರ್ಷಗಳಿಂದಲೂ ಇಳಿಕೆ ಕಾಣುತ್ತಿದೆ. 1951ರಲ್ಲಿ ಶೇ. 84.1ರಷ್ಟಿದ್ದ ಹಿಂದುಗಳ ಪ್ರಮಾಣ 2011ರಲ್ಲಿ ಶೇ. 78.35ಕ್ಕೆ ಇಳಿಕೆಯಾಗಿದೆ. ಅಂದರೆ ಸುಮಾರು ಶೇ. 6ರಷ್ಟು ಇಳಿಕೆ ಆದಂತಾಗಿದೆ. ಇದೇ ಅವಧಿಯಲ್ಲಿ ಮುಸಲ್ಮಾನರ ಪ್ರಮಾಣ ಶೇ. 9.9ರಿಂದ 14.2ಕ್ಕೆ ಏರಿದೆ ಅಂದರೆ ಶೇ. 4.3 ರಷ್ಟು ಏರಿಕೆಯಾಗಿದೆ. ಅಂದರೆ ದೇಶ ಸ್ವತಂತ್ರಗೊಂಡ 70 ವರ್ಷಗಳಲ್ಲಿ ಹಿಂದುಗಳ ಜನಸಂಖ್ಯೆ ಏರಿಕೆಯ ಗತಿ ಮುಸ್ಲಿಮರ ಏರಿಕೆಗಿಂತ ಬಹಳ ಕಡಿಮೆಯಿದೆ. ಇನ್ನೂ ಸ್ಪಷ್ಟಗೊಳಿಸಬೇಕೆಂದರೆ ವಿರುದ್ಧ ದಿಕ್ಕಿನಲ್ಲಿದೆ. ಇದು ನಿಜಕ್ಕೂ ಗಾಬರಿಗೊಳಿಸುವ ಅಂಶ. ಒಂದು ಅಂದಾಜಿನ ಪ್ರಕಾರ ಇನ್ನು ಮುಂದಿನ 40 ವರ್ಷಗಳಲ್ಲಿ ಅಂದರೆ 2065ರ ವೇಳೆಗೆ ದೇಶದ ಜನಸಂಖ್ಯೆಯ ಅರ್ಧಭಾಗ ಮುಸ್ಲಿಮರದ್ದೇ ಆಗಿರುವ ಸಾಧ್ಯತೆ ಇದೆ. ಇದು ಹೆಚ್ಚು ಸಮಯವೇನಲ್ಲ. ಮುಂದಿನ ಎರಡು ಅಥವಾ ಮೂರು ಪೀಳಿಗೆ ಮಾತ್ರ ಎನ್ನುವುದು ನೆನಪಿಡಬೇಕಾದ ಸಂಗತಿ.

### ಕುಟುಂಬ ಯೋಜನೆ ಯಾರಿಗಾಗಿ?

ಈಗಿನ ಅಧ್ಯಯನ ಪ್ರಕಾರ ಶೇ. 60ಕ್ಕೂ ಹೆಚ್ಚು ಹಿಂದೂಗಳು ಒಂದಲ್ಲಾ ಒಂದು ವಿಧಾನದಿಂದ ಸಂತಾನ ನಿಯಂತ್ರಣವನ್ನು ಮಾಡುತ್ತಿದ್ದರೆ, ಮುಸಲ್ಮಾನರಲ್ಲಿ ಇದರ ಅರ್ಧದಷ್ಟು (ಸುಮಾರು ಶೇ 30ರಷ್ಟು) ಮಂದಿ ಮಾತ್ರ ಕುಟುಂಬ ಯೋಜನೆಯ ಮೊರೆ ಹೋಗುತ್ತಿದ್ದಾರೆ. ಹಿಂದು ಜನಸಂಖ್ಯೆ ಒಂದು ಕುಟುಂಬಕ್ಕೆ ಒಂದು ಮಗುವನ್ನು ಸೇರಿಸುವಲ್ಲಿ ಸೋಲುತ್ತಿದ್ದರೆ, ಮುಸ್ಲಿಂ ಜನಸಂಖ್ಯೆ ಒಂದು ಕುಟುಂಬಕ್ಕೆ ನಾಲ್ಕಾರು ಮಕ್ಕಳನ್ನು ಸೇರಿಸುವುದಕ್ಕೆ ಹಿಂಜರಿಯುತ್ತಿಲ್ಲ.

ಕಳೆದ ಜನಗಣತಿಯಲ್ಲಿಯೂ ಮುಸ್ಲಿಂ ಜನಸಂಖ್ಯೆ ಏರಿಕೆಯ ವರದಿ ಬಂದಾಗ ಕೆಲವು ಸುಧಾರಣಾವಾದಿ ಮುಸಲ್ಮಾನರು ತಮ್ಮ ಸಮುದಾಯದ ಮಹಿಳೆಯರು ಕುಟುಂಬ ಯೋಜನೆಯನ್ನು ಅನುಸರಿಸಬೇಕೆಂದು ಸಲಹೆ ನೀಡಿದರು. ಆದರೆ ಇದನ್ನು ಅದೇ ಸಮುದಾಯದ ಪ್ರಮುಖರು, ರಾಜಕೀಯ ನೇತಾರರು, ಮುಲ್ಲಾಗಳು ತೀವ್ರವಾಗಿ ವಿರೋಧಿಸಿದರು. ಮಾತ್ರವಲ್ಲ ಕುಟುಂಬ ಯೋಜನೆಯ ವಿರುದ್ಧ ಸಾರ್ವಜನಿಕವಾಗಿ ಪ್ರತಿಭಟನೆಗಳೂ ನಡೆದವು.

### ಇದೊಂದು ಅಂತರರಾಷ್ಟ್ರೀಯ ಷಡ್ಯಂತ್ರ

ಮುಸಲ್ಮಾನ್ ಜನಸಂಖ್ಯೆಯ ತೀವ್ರತರ ಏರಿಕೆಯು ಇಡೀ ಜಗತ್ತನ್ನು ಇಸ್ಲಾಂಮಯ ಮಾಡುವ ಅಂತರರಾಷ್ಟ್ರೀಯ ಷಡ್ಯಂತ್ರದ ಪ್ರಮುಖ ನಡೆ. ಜಗತ್ತಿನ ಭೂಪಟದಿಂದ ಇತರೆ ಮತಸಂಸ್ಕೃತಿಗಳನ್ನು ಅಳಿಸಿ ಹಾಕಲು ಶತಮಾನಗಳಿಂದಲೂ ಇಸ್ಲಾಂನಂತಹ ಸೆಮೆಟಿಕ್ ಮತಗಳು ಪ್ರಯತ್ನಿಸುತ್ತಲೇ ಇವೆ. ಜನಹತ್ಯೆ, ಭಯೋತ್ಪಾದನೆ, ಮತಾಂತರ, ಅಕ್ರಮ ವಲಸೆ, ನೇರಯುದ್ಧ ಮೊದಲಾದವು ಪ್ರತಿರೋಧಗಳಿಗೆ ಕಾರಣವಾದರೆ, ತಾವಿರುವ ಸ್ಥಳದಲ್ಲಿಯೇ ಅತಿ ಸಂತಾನದ ಮೂಲಕ ಸ್ಥಳೀಯ ಜನಸಂಖ್ಯಾ ಚಿತ್ರಣವನ್ನೇ ಬದಲಿಸುವುದು ಮತ್ತೊಂದು ಸುಲಭ ಮಾರ್ಗ. ಇಲ್ಲಿ ಯಾವುದೇ ಪ್ರತಿರೋಧದ ಭಯವಿಲ್ಲ, ಮಾತ್ರವಲ್ಲ ಇತರರು ಈ ತಂತ್ರವನ್ನು ಅರಿಯುವ, ಅಳವಡಿಸಿಕೊಳ್ಳುವ ಹೊತ್ತಿಗಾಗಲೇ ಆ ಪ್ರದೇಶದ, ದೇಶದ ಜನಸಂಖ್ಯೆಗಿಂತ ಮುಸಲ್ಮಾನರ ಸಂಖ್ಯೆ ಹೆಚ್ಚಾಗಿಬಿಟ್ಟಿರುತ್ತದೆ. ಇದು ಮುಸಲ್ಮಾನರು ಜೀವನ ಮಟ್ಟಕ್ಕಿಂತ ಜನಸಂಖ್ಯೆಯ ಹೆಚ್ಚಳಕ್ಕೆ ಪ್ರಾಧಾನ್ಯತೆ ಕೊಡುವುದರ ಸ್ಪಷ್ಟ ಚಿತ್ರಣವಾಗಿದೆ.

ಯೂರೋಪಿನ ದೇಶಗಳಲ್ಲಿ ಕುಸಿಯುತ್ತಿರುವ ಮುಸಲ್ಮಾನೇತರರ ಜನಸಂಖ್ಯೆ, ಆಫ್ರಿಕಾದ ದೇಶಗಳಲ್ಲಿ ಹೆಚ್ಚುತ್ತಿರುವ ಮುಸಲ್ಮಾನರ ಜನಸಂಖ್ಯೆಗಳನ್ನು ಗಮನದಲ್ಲಿಟ್ಟುಕೊಂಡರೆ, ಈ ಶತಮಾನದ ಕೊನೆಯ ಹೊತ್ತಿಗೆ ಬರೀ ಜನಸಂಖ್ಯಾ ಚಿತ್ರಣ ಬದಲಿಸುವುದರ ಮೂಲಕವೇ ಮುಸಲ್ಮಾನರು ಯಾವುದೇ ಯುದ್ಧವಿಲ್ಲದೇ ಜಗತ್ತನ್ನು ಗೆಲ್ಲಬಹುದೆನ್ನಿಸುತ್ತದೆ. ಈಗಾಗಲೇ ಅರೇಬಿಯಾದಂತೆ ಯೂರೋಪನ್ನು ಯುರೋಬಿಯಾ ಮಾಡಬೇಕೆಂಬ ಯೋಜನೆ ಜಾಗತಿಕ ಮಟ್ಟದಲ್ಲಿ ಚಾಲನೆಗೊಂಡಿದೆ.



ಮೂರ್ಖ ಜಾತ್ಯತೀತ ಪಂಡಿತರು ಮುಸಲ್ಮಾನರಲ್ಲಿರುವ ಶಿಕ್ಷಣದ ಕೊರತೆ ಮತ್ತು ಬಡತನವೇ ಇದಕ್ಕೆ ಕಾರಣ ಎಂದು ಬೊಬ್ಬೆ ಹಾಕುತ್ತಾರೆ. ಆದರೆ ಮುಸಲ್ಮಾನರಲ್ಲಿ ಸದಾ ಜಾಗೃತವಾಗಿರುವ ಜಿಹಾದಿ ಪ್ರಜ್ಞೆಯೇ ಇದರ ಮೂಲ ಕಾರಣ ಎಂದು ಗುರುತಿಸಲು ವಿಫಲರಾಗುತ್ತಿದ್ದಾರೆ. ಅತ್ಯಂತ ವಿದ್ಯಾವಂತ ಮುಸ್ಲಿಮರೂ ಬಹುಪತ್ನಿತ್ವವನ್ನು, ಬಹುಸಂತಾನವನ್ನು ಹೊಂದಿರುವ ಉದಾಹರಣೆಗಳು ಸುತ್ತಮುತ್ತ ಕಣ್ಣಾಡಿಸಿದರೆ ಸಾಕು ದೊರಕೀತು.

ಭಾರತದಲ್ಲಿ ಮುಸ್ಲಿಂ ಮತ್ತು ಹಿಂದೂಗಳಲ್ಲಿನ ಸಾಕ್ಷರತೆಯ ಪ್ರಮಾಣ ಬಹುಪಾಲು ಏಕ ರೂಪತೆಯಲ್ಲಿದೆ. ಉದಾಹರಣೆಗೆ ಕೇರಳದಲ್ಲಿ ಶೇ. 90 ಮುಸಲ್ಮಾನರು ಸಾಕ್ಷರರು. ಆದರೂ ಅಲ್ಲಿನ ಮುಸ್ಲಿಮರ ಜನಸಂಖ್ಯಾ ಬೆಳವಣಿಗೆ ದರ ಶೇ. 16ಕ್ಕಿಂತ ಹೆಚ್ಚಿದೆ. ಇದು ಅಕ್ಕಪಕ್ಕದ ರಾಜ್ಯಗಳಿಗಿಂತ ಹೆಚ್ಚು (ಶೇ. 9.4) ಒಟ್ಟು ಸಾಕ್ಷರತೆಯ ಪ್ರಮಾಣ ಭಾರತೀಯ ಮುಸಲ್ಮಾನರಲ್ಲಿ ಶೇ. 60 ಇದ್ದರೆ ಪಾಕಿಸ್ತಾನದಲ್ಲಿ ಇದು ಕೇವಲ ಶೇ. 43 ಮಾತ್ರ. ಹೀಗಿದ್ದರೂ ಶಿಕ್ಷಣವಂಚಿತ ಮುಸ್ಲಿಮರು ಮಾತ್ರ ಹೆಚ್ಚು ಮಕ್ಕಳನ್ನು ಹೊಂದುತ್ತಿದ್ದಾರೆ ಎಂದು ಹೇಳುವುದು ಅಪ್ಪಟ ಸುಳ್ಳು.

*(3ನೇ ಪುಟಕ್ಕೆ)*

### ಆತಂಕ ಏಕೆ?

ಅನೇಕ ಅಂತರರಾಷ್ಟ್ರೀಯ ಅಧ್ಯಯನಗಳು ಹೇಳುವ ಪ್ರಕಾರ ಯಾವುದೇ ಸಂಸ್ಕೃತಿಯು ಮುಂದಿನ ಶತಮಾನಕ್ಕೂ ಮುಂದುವರಿಯಬೇಕೆಂದಿದ್ದರೆ (100 ವರ್ಷಗಳ ನಂತರವು ಜೀವಂತವಿರಬೇಕೆಂದರೆ) ಆ ಸಂಸ್ಕೃತಿಯನ್ನು ಅನುಸರಿಸುವ ಪ್ರತಿ ಕುಟುಂಬಕ್ಕೆ ಕನಿಷ್ಠ ಮೂರಾದರೂ ಮಕ್ಕಳಿರಬೇಕು. ಯಾವುದೇ ಯುದ್ಧ, ಪ್ರವಾಹ, ಸ್ಫೋಟ ಅಥವಾ ಬೀಕರ ಪ್ರಾಣಹಾನಿ ಸಂಭವಿಸದಿದ್ದರೂ ಕೇವಲ ಜನನ ಪ್ರಮಾಣ ಕುಸಿತದಿಂದಲೇ ನಿರ್ದಿಷ್ಟ ಸಂಸ್ಕೃತಿಯನ್ನು ಅನುಸರಿಸುತ್ತಿರುವ ಜನರು ಅವರದೇ ಭೂಪ್ರದೇಶದಿಂದ ಇಲ್ಲವಾಗುವ ಉದಾಹರಣೆಗಳು, ಸಾಧ್ಯತೆಗಳು ಇವೆ. ಸದ್ಯ ಭಾರತದಲ್ಲಿರುವ ಪಾರ್ಸಿ ಸಮುದಾಯ ಇಂತಹ ಸಂಕಟವನ್ನೆದುರಿಸುತ್ತಿದೆ. ಮುಸಲ್ಮಾನ ಸಮಾಜಕ್ಕೆ ಈ ಆತಂಕವಿಲ್ಲ. ಏಕೆಂದರೆ ಅವರ ಜನಸಂಖ್ಯೆ ಏರಿಕೆ ದರವು ಅಖಂಡ ಭಾರತವನ್ನು ದೃಷ್ಟಿಯಲ್ಲಿರಿಸಿ ನೋಡಿದರೆ ಪ್ರತಿ 50 ವರ್ಷಗಳಿಗೊಮ್ಮೆ ಶೇ. 3ರಿಂದ 10ರವರೆಗೂ ಹೆಚ್ಚಾಗುತ್ತಿದೆ. ಇಸವಿ 1800 ರಲ್ಲಿ ಶೇ. 13, 1850ರಲ್ಲಿ ಶೇ. 16, 1900ರಲ್ಲಿ ಶೇ. 20, 1950ರಲ್ಲಿ ಶೇ 25 ಮತ್ತು ಈಗ ಶೇ. 35ರ ವರೆಗೆ ಏರಿಕೆಯಾಗಿದೆ. ಇದು ಕೇವಲ ಭಾರತದ ವಿಷಯದಲ್ಲಿ ಮಾತ್ರವಲ್ಲ. ಜಗತ್ತಿನ ಎಲ್ಲಾ ದೇಶಗಳಲ್ಲಿ ಅದು ಇಸ್ಲಾಂ ಅಥವಾ ಇಸ್ಲಾಮೇತರ ದೇಶ ಇರಲಿ, ಮುಸಲ್ಮಾನ ಸಮುದಾಯದ ಸಂಖ್ಯಾ ಬೆಳವಣಿಗೆ ಅಲ್ಲಿನ ಸ್ಥಳೀಯ ಜನ ಸಮುದಾಯಕ್ಕಿಂತ ಅತ್ಯಂತ ಹೆಚ್ಚಿದೆ.

**ಸಮರ್ಥ ಭಾರತ**

**ಒಂದು ಗುರಿ - ಹಲವು ದಾರಿ**

# ಕುಟುಂಬ ಪ್ರಬೋಧನ

ಸಾಮಾನ್ಯವಾಗಿ ಒಟ್ಟಿಗೆ ವಾಸಿಸುವ ರಕ್ತಸಂಬಂಧಿಗಳ ಘಟಕವನ್ನು ಕುಟುಂಬ ಎನ್ನಬಹುದು. ಪರಸ್ಪರ ಗೌರವ, ಪ್ರೀತಿ ವಿಶ್ವಾಸ, ಏಳು ಬೀಳುಗಳನ್ನು ಹಂಚಿಕೊಳ್ಳುವ ಭಾವ, ಭದ್ರತೆ, ಸಂಸ್ಕಾರ ಮತ್ತು ಕುಟುಂಬದ ಸದಸ್ಯರ ಬಗ್ಗೆ ಕಾಳಜಿ ಇವು ಕುಟುಂಬದ ಸಾಮಾನ್ಯ ಲಕ್ಷಣಗಳಾಗಿವೆ. ಕುಟುಂಬವು ಸಮಾಜದೊಂದಿಗೆ ವ್ಯಕ್ತಿಯ ಸಂಪರ್ಕದ ಮೊದಲ ಕೊಂಡಿಯಾಗಿದೆ. ಮನೆಯೆನ್ನುವುದು ಕೇವಲ ನಾಲ್ಕು ಗೋಡೆಗಳ ಒಂದು ಕಟ್ಟಡವಲ್ಲ. ಇದು ಸಂಸ್ಕಾರ ಬೆಳೆಸುವ ಕೇಂದ್ರ, ಇಲ್ಲಿ ವಾಸಿಸುವ ಜನರು ಒಬ್ಬರಿಗೊಬ್ಬರು ಶುಭವನ್ನು ಬಯಸುತ್ತಾರೆ, ತಪ್ಪುಗಳನ್ನು ತಿದ್ದುತ್ತಾರೆ, ಸುಖ ದುಃಖಗಳನ್ನು ಹಂಚಿಕೊಳ್ಳುತ್ತಾರೆ, ಕಷ್ಟದ ಸಮಯದಲ್ಲಿ ಸಹಾಯ ಹಸ್ತ ನೀಡುತ್ತಾರೆ, ಉತ್ತಮ ಬದುಕಿನ ಪ್ರೇರಣೆ ನೀಡುತ್ತಾರೆ. ಮನೆಯೆನ್ನುವುದು ಕಿರಿಯರ ಮಟ್ಟಿಗೆ ಹಿರಿಯರನ್ನು ನೋಡಿ ಕಲಿಯುವ ಪಾಠಶಾಲೆ.

ಮಾನವನು ಸ್ವಭಾವತಃ ಸಂಘಜೀವಿಯಾದರೂ ಸಮಾಜದೊಂದಿಗೆ ಸೇರಿ ಬದುಕುವಾಗ ವಿವಿಧ ಪ್ರಕಾರದ ಆಲೋಚನೆ ಆಚರಣೆಗಳ ಜನರೊಂದಿಗೆ ಹೊಂದಿಕೊಳ್ಳುವುದು ಅನಿವಾರ್ಯ. ವಿಶಾಲ ಮನಸ್ಸು, ಸೌಹಾರ್ದಯುತ ಮಾತು, ಸಂಸ್ಕಾರಯುತ ವ್ಯವಹಾರ, ಇತರರನ್ನು ಪ್ರಭಾವಿಸಬಲ್ಲ ಆದರ್ಶ ಮತ್ತು ಮೌಲ್ಯಗಳನ್ನು ಅನುಸರಿಸುವುದು ಮುಂತಾದ ಗುಣಗಳು ಮನುಷ್ಯನ್ನು ಇತರೊಡನೆ ಸಾಮರಸ್ಯದಿಂದ ಬದುಕಲು ಸಮರ್ಥನನ್ನಾಗಿಸುತ್ತವೆ. ಒಂದು ರೀತಿಯಲ್ಲಿ ಚಿಕ್ಕ ಸಮಾಜವೇ ಆಗಿದ್ದ ಸುಸಂಸ್ಕೃತ ಅವಿಭಕ್ತ ಕುಟುಂಬಗಳು ವ್ಯಕ್ತಿಯು ಸಮಾಜದೊಂದಿಗೆ ಬೆರೆತು ಬದುಕಲು ಬೇಕಾದ ಸಂಸ್ಕಾರಗಳನ್ನು ಕಲಿಯಲು ಸಾಕಷ್ಟು ಅವಕಾಶಗಳನ್ನು ನೀಡುತ್ತಿದ್ದವು. ಅಂತಹ ಪರಿವಾರಗಳು ಜೀವನ ಪಾಠದ ಪಾಠಶಾಲೆಗಳಾಗಿವೆ. ಹಾಗೆಯೇ ಭಾರತೀಯ ಸಮಾಜ ಇಂತಹ ಸುದೃಢ ಕೌಟುಂಬಿಕ ನೆಲೆಗಟ್ಟಿನ ಮೇಲೆ ನಿಂತಿರುವುದರಿಂದಲೇ ರಾಜಕೀಯ ಸ್ಥಿತ್ಯಂತರಗಳ ನಡುವೆಯೂ ಪಾರಂಪರಿಕ ಮೌಲ್ಯಗಳನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು.

ಆದರೆ ಇಂದು ಕಾರಣಾಂತರಗಳಿಂದ ಕುಟುಂಬ ವ್ಯವಸ್ಥೆಯು ಶಿಥಿಲಗೊಳ್ಳುತ್ತಿರುವುದು, ಪ್ರಮುಖವಾಗಿ ಕೌಟುಂಬಿಕ ಚೌಕಟ್ಟು ದುರ್ಬಲವಾಗುತ್ತಿರುವುದು ಅತ್ಯಂತ ಕಳವಳದ ವಿಷಯವಾಗಿದೆ.

ಭಾರತೀಯ ಸಂಸ್ಕೃತಿಯ ಪ್ರತೀಕವೇ ಆದ ಕುಟುಂಬ ವ್ಯವಸ್ಥೆಯನ್ನು ಬಲಗೊಳಿಸುವ ನಿಟ್ಟಿನಲ್ಲಿ ಅನೌಪಚಾರಿಕವಾಗಿ "ಕುಟುಂಬ ಪ್ರಬೋಧನ" ಎಂಬ ಹೆಸರಿನಲ್ಲಿ ಕರ್ನಾಟಕದಲ್ಲಿ ಕಾರ್ಯ ನಡೆಯುತ್ತಿದೆ.

### ಉದ್ದೇಶಗಳು

- ಮುಂದಿನ ತಲೆಮಾರಿಗಾಗಿ ಕುಟುಂಬ ವ್ಯವಸ್ಥೆಯನ್ನು ರಕ್ಷಿಸುವುದು; ತಮ್ಮ ವಂಶ/ಕುಟುಂಬದ ವಾರಸುದಾರರಾಗಿ ಹಿಂದಿನ ಎಲ್ಲ ಪರಂಪರೆಯನ್ನು ಉಳಿಸಿ ಯಾವುದೇ ರೀತಿಯಲ್ಲಿ ಶಿಥಿಲವಾಗದಂತೆ ಮುಂದಿನ ಪೀಳಿಗೆಗೆ ತಲುಪಿಸುವುದು
- ಪರಸ್ಪರ ಸಹಕಾರದ ಸಾಮರಸ್ಯದ ವ್ಯವಸ್ಥೆಯನ್ನು ಪುನರ್ ಸ್ಥಾಪಿಸುವುದು
- ಹಂಚಿಕೊಳ್ಳುವುದು ಮತ್ತು ಇನ್ನೊಬ್ಬರ ಬಗ್ಗೆ ಕಾಳಜಿ ತೋರುವುದು ಮುಂತಾದ ಕೌಟುಂಬಿಕ ಮೌಲ್ಯಗಳನ್ನು ಮುಂದಿನ ತಲೆಮಾರಿಗೆ ವರ್ಗಾಯಿಸುವುದು
- ಉತ್ತಮ ಬಾಳ್ವೆ ಮತ್ತು ಪರಸ್ಪರ ಅಭಿವೃದ್ಧಿಗೆ ಪೂರಕವಾಗುವ ಅಂಶಗಳನ್ನು ಕಲಿಯುವುದು

### ನಡೆಸುತ್ತಿರುವ ಕಾರ್ಯಕ್ರಮಗಳು

- ವಾರದಲ್ಲಿ ಒಂದು ದಿನ ಕುಟುಂಬದ ಸದಸ್ಯರೆಲ್ಲರೂ ಒಟ್ಟಿಗೆ ಕುಳಿತು, ಕುಟುಂಬದ ಇತಿಹಾಸ, ಪ್ರೇರಕ ಕಥೆಗಳು, ಘಟನೆಗಳು ಮುಂತಾದ ಧನಾತ್ಮಕ ವಾತಾವರಣವನ್ನು ಬೆಳೆಸುವ ವಿಷಯದಲ್ಲಿ ಮಾತುಕತೆಯಾಡುವುದು. ಹತ್ತಿರದ ಕುಟುಂಬಗಳು ವಾರ ಅಥವಾ ತಿಂಗಳಲ್ಲಿ 1–2 ಗಂಟೆ ಅಥವಾ ಯಾವುದೋ ವಿಶೇಷ ಸಂದರ್ಭದಲ್ಲಿ ಒಟ್ಟಿಗೆ ಸೇರುವುದು. ಇವುಗಳಿಂದ ಕುಟುಂಬಗಳು ಹಾಗೂ ಸದಸ್ಯರುಗಳ ನಡುವೆ ಒಂದು ರೀತಿಯ ಆತ್ಮೀಯತೆ ಸಾಧ್ಯವಾಗುವುದು.
- ಕುಟುಂಬ ವ್ಯವಸ್ಥೆಯ ಬಗ್ಗೆ ಅನೌಪಚಾರಿಕ ಚರ್ಚೆಗಳು, ನಮ್ಮ ಹಾಗೂ ಇಂದಿನ ಬಾಲ್ಯ, ಹೊಸ ತಲೆಮಾರಿನ ಮಕ್ಕಳು, ಇಂದಿನ ಜೀವನ ಶೈಲಿ, ಲಾಭ ನಷ್ಟಗಳು ಇತ್ಯಾದಿ ವಿಷಯಗಳಲ್ಲಿ ಮಾತುಕತೆ.
- ಪರಸ್ಪರ ಕಾಳಜಿ, ಸಹಕಾರ, ಪಾಲಕರ ಜವಾಬ್ದಾರಿ, ಹವ್ಯಾಸ ಮುಂತಾದ ವಿಷಯಗಳ ಜಾಗೃತಿಗಾಗಿ ನವವಿವಾಹಿತ ದಂಪತಿಗಳ ವರ್ಕ್‌ಶಾಪ್ ಏರ್ಪಡಿಸುವುದು. ಹಿಂದೆ ಅವಿಭಕ್ತ ಕುಟುಂಬಗಳಲ್ಲಿ ಈ ವಿಷಯಗಳು ಕಲಿಸಲ್ಪಡುತ್ತಿದ್ದವು.
- ಶ್ರೀಮಾತಾ ಕುಟುಂಬ ಚಿಂತನ ಯಾತ್ರೆ: ಈ ಯೋಜನೆಯಂತೆ ಆಯ್ದ ದಂಪತಿಗಳನ್ನು ಹಳ್ಳಿಗಳ ಮನೆಗಳಲ್ಲಿ ಉಳಿಸಲಾಗುವುದು. ಈ ಹಳ್ಳಿ ಮನೆಗಳ ವಾತಾವರಣ, ಸಾಂಸ್ಕೃತಿಕ ಪರಂಪರೆ ಕುಟುಂಬ ಜೀವನದ ಉತ್ತಮ ಅನೌಪಚಾರಿಕ ಶಿಕ್ಷಣವನ್ನು ನೀಡುವಲ್ಲಿ ಸಹಕಾರಿಯಾಗಿವೆ. ಅಲ್ಪ ಸಮಯದ ವಾಸದಲ್ಲೇ ಅತಿಥಿಗಳಾಗಿ ಬಂದವರು ಕುಟುಂಬದ ಭಾಗವೇ ಆಗಿ ತಮ್ಮೊಡನೆ ಅಪಾರವಾದ ಅನುಭವಗಳನ್ನು ಕೊಂಡೊಯ್ಯುವರು.
- ಕುಟುಂಬಗಳ ವಾರ್ಷಿಕ ಸ್ನೇಹ ಮಿಲನಗಳು

### ನಾವೇನು ಮಾಡಬಹುದು?

- ನಮ್ಮ ನಮ್ಮ ಪರಿವಾರಗಳಲ್ಲಿ ಉತ್ತಮ ಆಚರಣೆಗಳನ್ನು ಅಳವಡಿಸುವುದು
- ನಮ್ಮ ಪ್ರದೇಶಗಳಲ್ಲಿ ಕುಟುಂಬ ಮಿಲನಗಳನ್ನು ಆಯೋಜಿಸುವುದು
- ಕುಟುಂಬ ಮಿಲನಗಳಲ್ಲಿ ಪಾಲ್ಗೊಳ್ಳುವಂತೆ ಜನರನ್ನು ಪ್ರೇರೇಪಿಸುವುದು
- ನವದಂಪತಿಗಳ ವರ್ಗಗಳನ್ನು ಆಯೋಜಿಸುವುದು, ಪಾಲಕರ ತರಬೇತಿ ವರ್ಗಗಳನ್ನು ಆಯೋಜಿಸುವುದು
- ಕುಟುಂಬ ಪ್ರಬೋಧನದ ಸಾಹಿತ್ಯವನ್ನು ಸ್ನೇಹಿತರು ಬಂಧುಗಳೊಂದಿಗೆ ಹಂಚಿಕೊಳ್ಳುವುದು


ಸಂಪರ್ಕ

**ಕುಟುಂಬ ಪ್ರಬೋಧನ**

"ಜ್ಞಾನಗಿರಿ" #75/76, 4ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ
ಸೌದಾಮಿನಿ ಲೇಔಟ್
ಕೋಣನಕುಂಟೆ, ಬೆಂಗಳೂರು – 560 062
ದೂರವಾಣಿ: 99001 57714 (ಶ್ರೀ ಸತೀಶ),
94802 28273(ವಸಂತ ಮಾಧವ)
ವೆಬ್‌ಸೈಟ್: http://kutumbprabodhan.org/


**ನೆಲದ ಮಾತು**

# ಸಾವಯವದಲ್ಲಿ ಭತ್ತದ ಕೃಷಿ

ಭತ್ತದ ಕೃಷಿಗೆ ಸಾಮಾನ್ಯವಾಗಿ ರಾಸಾಯನಿಕ ಗೊಬ್ಬರ, ಔಷಧಿ ಸಿಂಪಡಣೆಯದ್ದೇ ಮೇಲುಗೈ. ಒಂದ ಉತ್ಪಾದನೆಯಲ್ಲಿ ಹೆಚ್ಚು ಖರ್ಚು ತಗಲುವುದು ಇದಕ್ಕೆ. ಆದರೆ ರಾಸಾಯನಿಕ ಗೊಬ್ಬರ ಬಳಸದೇ, ಔಷಧಿ ಸಿಂಪಡಿಸದೆ ಭತ್ತ ಬೆಳೆಯಬಹುದೇ...?

ಈ ಪ್ರಶ್ನೆಗೆ ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ ಹೊಳೆಸಿರಿಗೆರೆ ಗ್ರಾಮದ ನಾಗರಾಜಪ್ಪ ತೋಟದ ಮನೆಯವರ ಜಮೀನಿನಲ್ಲಿ ಸಕಾರಾತ್ಮಕ ಉತ್ತರವಿದೆ. ಏಕೆಂದರೆ ಇವರು ಭತ್ತದ ಗದ್ದೆಗೆ ಬಳಸುವುದು ಕೇವಲ ಸಗಣಿಯ ದ್ರಾವಣ. ಅಪ್ಪಿತಪ್ಪಿಯೂ ರಾಸಾಯನಿಕ ಇವರ ಗದ್ದೆ ಸೋಕಿಲ್ಲ.

**ನೀರು ನುಗ್ಗಿದ್ದರೂ ನಳನಳಿಸುವ ಹೊಲ:** ಮೂರು ವರ್ಷಗಳ ಹಿಂದೆ ಇವರ ಭತ್ತದ ಜಮೀನಿಗೆ ನೀರು ನುಗ್ಗಿ ಹಾಳಾಗಿತ್ತು. ವಿಪರೀತ ಮಳೆಯಾಗಿದ್ದರಿಂದ ಊರಿನಿಂದ ಹರಿದುಬಂದ ರಾಡಿ ನೀರು ಇವರ ಗದ್ದೆಯಲ್ಲಿ ಸಂಗ್ರಹಗೊಂಡು ಬೆಳವಣಿಗೆಯ ಹಂತದಲ್ಲಿದ್ದ ಭತ್ತದ ಸಸಿಗಳನ್ನು ಒಣಗಿಸಿದ್ದವು. ಇದನ್ನು ಗಮನಿಸಿದ ಅನೇಕ ಮಂದಿ ವಿವಿಧ ಕಂಪೆನಿಗಳ ಔಷಧಿ ಬಳಕೆಗೆ ಸಲಹೆ ನೀಡಿದ್ದರು. ಸಾವಯವದ ಬಗ್ಗೆ ಮಾಹಿತಿ ಪಡೆದುಕೊಂಡಿದ್ದ ಇವರು ಯಾರ ಮಾತನ್ನೂ ಗಣನೆಗೆ ತೆಗೆದುಕೊಳ್ಳದೇ ಸಗಣಿ ದ್ರಾವಣವನ್ನು ತಯಾರಿಸಿ ಪೂರ್ತಿ ಗದ್ದೆಗೆ ಹಾಕಿದರು. ವಾರಾಕ್ಕೊಮ್ಮೆಯಂತೆ ನಾಲ್ಕಾರು ಬಾರಿ ಈ ಕ್ರಮ ಅನುಸರಿಸಿದ್ದರು. ಅಚ್ಚರಿಯ ಫಲಿತಾಂಶ ಕಂಡುಬಂತು. ಒಣಗಿ ಮುರುಟಿದ್ದ ಭತ್ತದ ಸಸಿಗಳು ಹಚ್ಚ ಹಸಿರಾಗಿ ಸಮೃದ್ಧವಾಗಿ ನಿಂತವು. ರಾಸಾಯನಿಕ ಸಿಂಪಡಣೆಗೆ ಸೂಚನೆ ನೀಡಿದ ಮಂದಿಯೂ ಇದನ್ನು ಗಮನಿಸಿ ಮೂಗಿನ ಮೇಲೆ ಬೆರಳಿಟ್ಟಿದ್ದರು. ಅಂದಿನಿಂದ ಆರಂಭವಾದ ಇವರ ಸಗಣಿ ದ್ರಾವಣ ಬಳಕೆಯ ಭತ್ತ ಕೃಷಿ ಇಂದಿಗೂ ಮುಂದುವರೆದಿದೆ.

ನಾಗರಾಜಪ್ಪ ಅವರದು ಹದಿನಾರು ಎಕರೆ ಜಮೀನು. 15 ಎಕರೆಯಲ್ಲಿ ಅಡಿಕೆ ಹಾಗೂ ತೆಂಗಿನ ತೋಟವಿದೆ. ಒಂದು ಎಕರೆ ಭತ್ತ ಕೃಷಿ ಮಾಡುತ್ತಾರೆ. ಸಾವಯವ ಕೃಷಿಯಲ್ಲಿ ಇವರಿಗೆ ವಿಶೇಷ ಆಸಕ್ತಿ. ಶರಣ ಮುದ್ದಣ್ಣ ಸಾವಯವ ಕೃಷಿ ಪರಿವಾರದಲ್ಲಿ ತಾಲ್ಲೂಕು ಸಂಚಾಲಕರಾಗಿ ಕೆಲಸ ನಿರ್ವಹಿಸಿದ ಅನುಭವವಿದೆ.

ಇನ್ನೊಬ್ಬರಿಗೆ ಸಾವಯವ ಕೃಷಿಯ ಬಗ್ಗೆ ಹೇಳಬೇಕಾದರೆ ತಾವೂ ಸಾವಯವ ಕೃಷಿ ಮಾಡುತ್ತಿರಬೇಕು ಎನ್ನುವುದು ಇವರ ತತ್ವ. ಭತ್ತ ಕೃಷಿಯನ್ನು ಸಂಪೂರ್ಣ ಸಾವಯವ ರೀತಿಯಲ್ಲಿ ಮಾಡುತ್ತಿದ್ದಾರೆ. ಭತ್ತ ಕೃಷಿಯನ್ನು ಗೊಬ್ಬರ ಹಾಗೂ ಸ್ಪ್ರೇ ಬಳಸದೇ ಮಾಡುವುದು ಇವರ ವಿಶೇಷತೆ. ಯಾವುದೇ ರೀತಿಯ ರಸಗೊಬ್ಬರಗಳ ಬಳಕೆಯನ್ನು ಕೈ ಬಿಟ್ಟು ಮೂರು ವರ್ಷಗಳಾಗಿವೆ. ಆದಾಗ್ಯೂ ಉತ್ತಮ ಇಳುವರಿ ಪಡೆ–ಯುತ್ತಿದ್ದಾರೆ.

**ಕೃಷಿ ಹೇಗೆ? :** ಒಂದು ಎಕರೆಯಲ್ಲಿ ಭತ್ತ ಕೃಷಿ ಮಾಡುತ್ತಾರೆ. ಸಾಮಾನ್ಯ ಪದ್ಧತಿಯಂತೆ ಸಸಿ ಮಡಿ ತಯಾರಿ. ಸಗಣಿ ದ್ರಾವಣ ತಯಾರಿಸಿ ಸಸಿ ಮಡಿಗೆ ಹಾಕುತ್ತಾರೆ. ಬೀಜ ಮೊಳಕೆಯೊಡೆದ ನಂತರ ಮೊದಲ ಬಾರಿ, ನಂತರ ಹತ್ತು ದಿನಕ್ಕೆ ಒಮ್ಮೆಯಂತೆ ಎರಡು ಬಾರಿ ದ್ರಾವಣ ಬಳಸುತ್ತಾರೆ. ನಾಟಿ ಮಾಡುವ ಗದ್ದೆಯನ್ನು ಚೆನ್ನಾಗಿ ಉಳುಮೆ ಮಾಡುತ್ತಾರೆ. ಆಗಲೂ ಗೊಬ್ಬರಗಳ ಬಳಕೆಯಿಲ್ಲ. ನೇರವಾಗಿ ಸಸಿಯನ್ನು ನಾಟಿಗೆ ಬಳಸುತ್ತಾರೆ. ಕಳೆ ನಿಯಂತ್ರಣಕ್ಕೂ ಕಳೆನಾಶಕ ಬಳಕೆ ಮಾಡುವುದಿಲ್ಲ. ನಾಟಿ ಮಾಡಿದ ನಾಲ್ಕನೇ ದಿನಕ್ಕೆ ಸಗಣಿ ದ್ರಾವಣವನ್ನು ಉಗ್ಗುತ್ತಾರೆ. ನಂತರ ಎಂಟನೇ ದಿನಕ್ಕೆ ಎರಡನೇ ಬಾರಿ, ಹದಿನೈದನೇ ದಿನಕ್ಕೆ ಮೂರನೇ ಬಾರಿ ನಂತರದಲ್ಲಿ ಪ್ರತೀ ಹದಿನೈದು ದಿನಕ್ಕೆ ಒಮ್ಮೆಯಂತೆ ಸಗಣಿ ದ್ರಾವಣ ಉಗ್ಗುವ ಕೆಲಸ ಮಾಡುತ್ತಾರೆ. ಕಟಾವು ಹಂತದವರೆಗೆ ಒಟ್ಟು 5 ರಿಂದ 6 ಬಾರಿ ಸಗಣಿ ದ್ರಾವಣ ಬಳಕೆ ಮಾಡುತ್ತಾರೆ.

ಇವರ ಒಂದು ಎಕರೆ ಭತ್ತದ ಭೂಮಿಯಲ್ಲಿ ನಾಲ್ಕು ಸಮಾನಾಂತರ ಮಡಿಗಳಿವೆ. ಪ್ರತಿ ಮಡಿಗೂ ಎರಡು ಬುಟ್ಟಿ ಸಗಣಿ ಬಳಸುತ್ತಾರೆ. ಎಕರೆಗೆ 8 ರಿಂದ 10 ಬುಟ್ಟಿ ಸಗಣಿಯನ್ನು ಒಂದು ಬಾರಿಗೆ ಬಳಕೆ ಮಾಡುತ್ತಾರೆ. ಬೆಳೆಯ ಅವಧಿಯಲ್ಲಿ ಐದು ಬಾರಿ ಸಗಣಿ ದ್ರಾವಣ ಉಗ್ಗಿದರೂ 50 ಬುಟ್ಟಿ ಬಳಕೆ ಮಾಡುತ್ತಾರೆ.

**ಉತ್ತಮ ಇಳುವರಿ:** ಭತ್ತದಿಂದ ಇಪ್ಪತ್ತೈದು ಕ್ವಿಂಟಾಲ್ ಇಳುವರಿ ಪಡೆಯುತ್ತಿದ್ದಾರೆ. ನಾಟಿಗಾಗಿ 2 ಸಾವಿರ ರೂಪಾಯಿ, ಕಳೆ ತೆಗೆಸಲು 2 ಸಾವಿರ, ಕಟಾವಿಗೆ 2,300 ರೂಪಾಯಿ ಖರ್ಚು ಮಾಡುತ್ತಾರೆ. ಸ್ವಂತ ಟ್ರಾಕ್ಟರ್ ಹೊಂದಿದ್ದರಿಂದ ಬೇರೆ ಯಾವುದೇ ಖರ್ಚು ಬರುತ್ತಿಲ್ಲ. ಕ್ವಿಂಟಾಲ್‌ಗೆ 1,500 ರೂಪಾಯಿಯಂತೆ ಲೆಕ್ಕ ಹಾಕಿದರೂ 37,500 ರೂಪಾಯಿ ಆದಾಯ ಸಿಗುತ್ತದೆ. ಖರ್ಚು ಕಳೆದರೆ 31,200 ರೂಪಾಯಿ ಆದಾಯ ಸಿಗುತ್ತಿದೆ ಎಂದು ಲೆಕ್ಕಾಚಾರ ಒಪ್ಪಿಸುತ್ತಾರೆ ನಾಗರಾಜಪ್ಪ ಅವರು.

ಸದ್ಯದ ಪರಿಸ್ಥಿತಿಯಲ್ಲಿ ಭತ್ತ ಬೆಳೆಗಾರರು ರಸಗೊಬ್ಬರ ಸಾಕಷ್ಟು ಬಳಕೆ ಮಾಡಿ ಎಷ್ಟೇ ಔಷಧ ಸಿಂಪರಣೆ ಮಾಡಿದರೂ ಭತ್ತ ಕೊಯ್ಲು ಮಾಡುತ್ತೇವೆಂಬ ಭರವಸೆ ಇರುವುದಿಲ್ಲ. ಆದರೆ ಇವರು ಈ ಮಾದರಿ ಅನುಸರಿಸುತ್ತಿದ್ದುದರಿಂದ ನಿಶ್ಚಿಂತೆಯಿಂದ ಇದ್ದಾರೆ. ರೋಗ, ಸ್ಪ್ರೇ ಗೊಂದಲಗಳಿಲ್ಲದೇ ನಿರೀಕ್ಷಿತ ಇಳುವರಿ ಪಡೆಯುತ್ತಿದ್ದಾರೆ. ಸಂಪರ್ಕಕ್ಕೆ: 9844973157.

ಕೃಪೆ : ಪ್ರಜಾವಾಣಿ

## ದಿವ್ಯಾ ಅಜಿತ್ : ಮಹಿಳಾ ತುಕಡಿಗಳ ನೇತೃತ್ವ



ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಇದೇ ಮೊದಲ ಬಾರಿ ಸೇನೆಯ ಮೂರು ಪಡೆಗಳ ಮಹಿಳಾ ತುಕಡಿಗಳು ಭಾಗವಹಿಸಿವೆ. 2010ರಲ್ಲಿ ಚೆನ್ನೈನಲ್ಲಿ ನಡೆದ ಅಧಿಕಾರಿಗಳ ತರಬೇತಿ ಅಕಾಡೆಮಿ (ಒಟಿಎ) ನಿರ್ಗಮನ ಪಥಸಂಚಲನದಲ್ಲಿ 'ಸೋರ್ಡ್ ಆಫ್ ಆನರ್' (Sword of Honour) ಪ್ರಶಸ್ತಿ ಪಡೆದ ದಿವ್ಯಾ ಅಜಿತ್ ಅವರು ಈ ಮಹಿಳಾ ತುಕಡಿಗಳ ನೇತೃತ್ವ ವಹಿಸಿದ್ದಾರೆ. ಸೇನಾ ಇತಿಹಾಸದಲ್ಲಿ ಇದೇ ಮೊದಲ ಬಾರಿ ಮಹಿಳೆಯೊಬ್ಬರು ಈ ಗೌರವಕ್ಕೆ ಪಾತ್ರರಾಗಿದ್ದಾರೆ. 'ನಾವು ಯಾರಿಗೂ ಕಮ್ಮಿ ಇಲ್ಲ. ಸೇನಾ ದಿನಾಚರಣೆಯಲ್ಲಿ ಮೊದಲ ಸಲ ಪಥಸಂಚಲನ ಮಾಡಿದ್ದೇವೆ. ಈಗ ಗಣರಾಜ್ಯೋತ್ಸವದಲ್ಲಿ ಮಾಡುತ್ತಿದ್ದೇವೆ. ಯುದ್ಧರಂಗದಲ್ಲಿ ಕೂಡ ಮುಂಚೂಣಿಯಲ್ಲಿ ನಿಲ್ಲುವುದಕ್ಕೆ ನಾವು ಬಯಸುತ್ತೇವೆ' ಎಂದು ಕ್ಯಾಪ್ಟನ್ ದಿವ್ಯಾ ಅಜಿತ್ ಹೇಳುತ್ತಾರೆ.


ಸಂಪಾದಕೀಯ ಸಹಕಾರ: ಜಿ.ಆರ್. ಸಂತೋಷ್, ಶಿವಪ್ರಸಾದ್ ಸುರ್ಯ, ಶ್ರೀವತ್ಸ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ರಾಜೇಶ್ ಪದ್ಮಾರ್, ಮೊಳಹಳ್ಳಿ ಅನಿಲ್‌ಕುಮಾರ್

*(1ನೇ ಪುಟದಿಂದ)*

# ಹಿಂದು ಕೌಂಟ್ ಡೌನ್

## ಅಖಂಡತೆಗೆ ಸವಾಲು

ನಾವು ಮುಸ್ಲಿಂ ಜನಸಂಖ್ಯೆಯ ಹೆಚ್ಚಳದ ಕುರಿತಾಗಿ ಏಕೆ ಕಳವಳಗೊಳ್ಳಬೇಕು? ಅವರೂ ಭಾರತೀಯ ಪ್ರಜೆಗಳೇ ತಾನೆ? ಜಗತ್ತಿನ ಇತರ ಮುಸಲ್ಮಾನರಿಗಿಂತ ನಮ್ಮವರು ಭಿನ್ನ ಎಂಬ ಜಾಣವಾದವನ್ನು ಅನೇಕರು ಹರಿಯಬಿಡುತ್ತಾರೆ. ಆದರೆ ಇದರ ದೂರಗಾಮಿ ಪರಿಣಾಮಗಳನ್ನು ಅರಿಯಲು ಇತಿಹಾಸದ ಒಳನೋಟಗಳು ಬೇಕಾಗುತ್ತವೆ.

ಭಾರತದ ಭಾಗಗಳೇ ಆಗಿದ್ದ ಬಲೂಚಿಸ್ತಾನ, ಸಿಂಧ್, ಲಾಹೋರ್, ಪಂಜಾಬ್‌ನ ಬಹುಭಾಗಗಳು, ಪೂರ್ವ ಬಾಂಗ್ಲಾ, ಜಮ್ಮು ಕಾಶ್ಮೀರದ ಉತ್ತರಭಾಗ, ಅಫ್ಘಾನಿಸ್ತಾನಗಳಲ್ಲಿ ಮೊದಲು ಮುಸ್ಲಿಂ ಜನಸಂಖ್ಯೆಯ ಹೆಚ್ಚಳವಾಯಿತು. ನಂತರ ಈ ಪ್ರದೇಶಗಳಲ್ಲಿ ಬಲಾತ್ಕಾರವಾಗಿ ಇಸ್ಲಾಂ ಸಂಸ್ಕೃತಿಯನ್ನು ಉಳಿದವರ ಮೇಲೆ ಹೇರಲಾಯಿತು. ಅಂತಿಮವಾಗಿ ಇವು ಭಾರತದಿಂದ ಸಿಡಿದು ಶತ್ರು ಪ್ರದೇಶಗಳಾದವು ಎಂಬುದನ್ನು ಮರೆಯ ಬಾರದು.

## ತುರ್ತು ಗಮನ ಬೇಕು

ಭಾರತದ ಗಡಿ ಪ್ರದೇಶದ ರಾಜ್ಯಗಳಲ್ಲಿ ಹೆಚ್ಚುತ್ತಿರುವ ಮುಸ್ಲಿಂ ಜನಸಂಖ್ಯೆಯ ಅಪಾಯಗಳು ಈಗಾಗಲೇ ಕಣ್ಣ ಮುಂದಿವೆ. ಬಾಂಗ್ಲಾದೇಶ ಮತ್ತು ಪಾಕಿಸ್ತಾನಗಳಿಂದಲೂ ನಿರಂತರವಾಗಿ ಹರಿದು ಬರುತ್ತಿರುವ ಅಕ್ರಮ ವಲಸಿಗರ ಸಂಖ್ಯೆ ಈಗ ಸುಮಾರು 5 ಕೋಟಿಯಷ್ಟು ಮುಟ್ಟಿದೆ ಎಂಬ ಅಂದಾಜಿದೆ. ಇವರಿಗೆ ಗಡಿರಾಜ್ಯಗಳ ಮುಸಲ್ಮಾನರ ಪೂರ್ಣ ಬೆಂಬಲವಿದೆ. ಇವರು ಗಡಿಪ್ರದೇಶಗಳಿಂದ ನುಸುಳಿ ಕೇರಳದ ಕಡಲ ತಡಿಯವರೆಗೂ ಹರಡಿ ಬಿಟ್ಟಿದ್ದಾರೆ.

ಈಗಲೂ ಅಸ್ಸಾಂನಂತಹ ಪೂರ್ವಾಂಚಲದ ರಾಜ್ಯಗಳು, ಜಮ್ಮು ಕಾಶ್ಮೀರ, ಪಶ್ಚಿಮ ಬಂಗಾಳ, ಉತ್ತರಪ್ರದೇಶದ ಅನೇಕ ಜಿಲ್ಲೆಗಳು ಹಿಂದುಗಳಿಗೆ ಅತ್ಯಂತ ಅಸುರಕ್ಷಿತವಾಗಿ ಪರಿಣಮಿಸಿದೆ. ದೇವಾಲಯ ಧ್ವಂಸ, ಹಿಂದೂಗಳ ಆಸ್ತಿ ಪಾಸ್ತಿಗೆ ಹಾನಿ, ಹೆಣ್ಣು ಮಕ್ಕಳ ಮೇಲೆ ಬಲಾತ್ಕಾರ ಮತ್ತು ಭಯೋತ್ಪಾದನೆಗೆ ಕುಮ್ಮಕ್ಕು ಇವು ನಿತ್ಯದ ಸುದ್ದಿಗಳಾಗಿವೆ. ಓಟಿನ ಆಸೆಗಾಗಿ ರಾಜಕಾರಣಿಗಳು ಪಕ್ಷಾತೀತವಾಗಿ ಮುಸಲ್ಮಾನರ ಬೆಂಬಲ ಕ್ಕಿಳಿದಿರುವುದು ಕಂಡುಬರುತ್ತಿದೆ. ದಕ್ಷಿಣದ ಕೇರಳ, ತೆಲಂಗಾಣಗಳೂ ಇದಕ್ಕೆ ಹೊರತಲ್ಲ. ಭಟ್ಕಳದಂತಹ ಕರ್ನಾಟಕದ ಪ್ರದೇಶಗಳು ಸಹ ಭಯೋತ್ಪಾದಕರ ತವರು ಮನೆಗಳಾಗಿವೆ.

ಮುಸ್ಲಿಂ ಬಾಹುಳ್ಯದ ಪ್ರದೇಶಗಳಲ್ಲಿ ಶರಿಯಾ ನ್ಯಾಯಾಲಯಗಳು ತಲೆ ಎತ್ತುತ್ತವೆ. ಮುಲ್ಲಾ, ಮೌಲ್ವಿಗಳೇ ನ್ಯಾಯಾಧೀಶರಾಗುತ್ತಿದ್ದಾರೆ. ಪರ್ಯಾಯ ಕಾನೂನು ವ್ಯವಸ್ಥೆಯೇ ಇದರಿಂದ ನಿರ್ಮಾಣವಾಗುತ್ತಿದೆ.

**ಬ್ರಿಟನ್‌ನ ಹಿರಿಯ ಪತ್ರಕರ್ತ ಡಾ॥ ಪೀಟರ್ ಹಾಮಂಡ್ (Dr. Peter Hammond) ತಮ್ಮ Slavery, Terrorism and Islam: The Historical Roots and Contemporary Threat ಎಂಬ ಪುಸ್ತಕದಲ್ಲಿ ಮುಸ್ಲಿಮರ ಸಂಖ್ಯೆ ಒಂದು ದೇಶದಲ್ಲಿ ಹೆಚ್ಚುತ್ತಾ ಹೋದರೆ ಏನಾಗುತ್ತದೆಂದು ತಿಳಿಸಿದ್ದಾರೆ. ಜೊತೆಗೆ ಪೂರಕ ಉದಾಹರಣೆ, ವಿಶ್ಲೇಷಣೆಯನ್ನೂ ಕೊಡುತ್ತಾರೆ. ಅದರ ಕಿರು ಪರಿಚಯ ಇಂತಿದೆ:**

- ಮುಸಲ್ಮಾನರ ಜನಸಂಖ್ಯೆ ಶೇ. 2ಕ್ಕಿಂತ ಕಡಿಮೆ ಇರುವೆಡೆಗಳಲ್ಲಿ ಅವರು ಶಾಂತಿಪ್ರಿಯರಂತೆ ಬದುಕುತ್ತಾರೆ. ಅವರ ಬಲವೂ ಕಡಿಮೆ. ಹೀಗಾಗಿ ಹೆಚ್ಚಾಗಿ ಇಲ್ಲಿನ ಮುಸ್ಲಿಮರು ಯಾವುದೇ ದೇಶವಿರೋಧಿ ಚಟುವಟಿಕೆಗಳಲ್ಲಿ ತೊಡಗುವುದಿಲ್ಲ. ಉದಾ: ಅಮೇರಿಕ (ಶೇ. 0.6), ಆಸ್ಟ್ರೇಲಿಯಾ (ಶೇ. 1.5), ಕೆನಡಾ (1.9%), ಚೈನಾ (1.8%), ಇಟಲಿ (1.5%), ನಾರ್ವೆ (1,8%) ಇತ್ಯಾದಿ ದೇಶಗಳಲ್ಲಿ.
- ಮುಸಲ್ಮಾನರ ಜನಸಂಖ್ಯೆ ಶೇ. 2 ರಿಂದ 5ರಷ್ಟಿರುವೆಡೆ ನಿಧಾನವಾಗಿ ಅಸಂತುಷ್ಟ ಹಾಗೂ ಇತರ ಜನಾಂಗೀಯರನ್ನು ಮತಾಂತರಗೊಳಿಸುವ ಕಾರ್ಯವನ್ನು ಪ್ರಾರಂಭಿಸುತ್ತಾರೆ. ಉದಾ: ಡೆನ್ಮಾರ್ಕ್ (2%), ಜರ್ಮನಿ (3.7), ಇಂಗ್ಲೆಂಡ್ (2.7%), ಸ್ಪೈನ್ (4%), ಥಾಯ್ಲೆಂಡ್ (4.6%) ಇತ್ಯಾದಿ.
- ಮುಸಲ್ಮಾನರ ಜನಸಂಖ್ಯೆ ಶೇ.5 ದಾಟಿದೆಡೆಗಳಲ್ಲಿ ಜನಸಂಖ್ಯೆಯಲ್ಲಿ ತಮ್ಮ ಪ್ರಮಾಣ ಹೆಚ್ಚಿಸುವುದು ಹಾಗೂ ಸವಲತ್ತುಗಳಿಗಾಗಿ ಅತಿಯಾದ ಪ್ರಭಾವ ಬೀರಲು ಪ್ರಾರಂಭಿಸುತ್ತವೆ. ಮಾರಾಟ ಮಳಿಗೆಗಳಲ್ಲಿ ಹಲಾಲ್ ಮಾಂಸವನ್ನು ಒದಗಿಸಬೇಕೆಂದು ಪಟ್ಟು ಹಿಡಿಯಲು ಪ್ರಾರಂಭಿಸಿದ್ದಾರೆ. ಈ ಹಂತದಲ್ಲಿ ಅವರು ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಂಡು ಶರಿಯಾ (ಇಸ್ಲಾಮ್ ಕಾನೂನು) ಕಾನೂನು ಜಾರಿಗೆ ತರುವ ಯತ್ನ ನಡೆಸುತ್ತವೆ. ಉದಾ: ಫ್ರಾನ್ಸ್ (ಶೇ. 8), ಫಿಲಿಪ್ಪೈನ್ಸ್ (ಶೇ. 5), ನೆದರ್‌ಲ್ಯಾಂಡ್ (ಶೇ. 5.5) ಇತ್ಯಾದಿ ದೇಶಗಳಲ್ಲಿ.
- ಮುಸಲ್ಮಾನರ ಜನಸಂಖ್ಯೆ ಶೇ. 10 ತಲಪುತ್ತಿದ್ದಂತೆ ಅವರು ಅರಾಜಕತೆ ನಿರ್ಮಿಸಲು ಪ್ರಾರಂಭಿಸುತ್ತಾರೆ. ಮುಸ್ಲಿಮೇತರ ಚಟುವಟಿಕೆಗಳಿಗೆ ಅಡ್ಡಿ, ತೀವ್ರ ಪ್ರತಿರೋಧ, ದೊಂಬಿ ಮುಂತಾದ ಚಟುವಟಿಕೆಗಳನ್ನು ನಡೆಸುತ್ತಾರೆ. ಉದಾ: ಗಯಾನಾ, ಭಾರತ, ಕೀನ್ಯಾ, ರಷ್ಯಾ, ಇತ್ಯಾದಿ.
- ಮುಸಲ್ಮಾನರ ಜನಸಂಖ್ಯೆ ಶೇ. 20 ದಾಟುತ್ತಿದ್ದಂತೆ ಜಿಹಾದ್ ಸೇನೆಯ ಮೂಲಕ ಅನಾವಶ್ಯಕ ಗಲಭೆಗಳು, ಅನ್ಯಮತಗಳ ಶ್ರದ್ಧಾಕೇಂದ್ರಗಳ ಮೇಲೆ ದಾಳಿ, ಉಗ್ರಗಾಮಿ ಚಟುವಟಿಕೆಗಳು ಹಾಗೂ ನರಮೇಧಗಳು ನಡೆಯುತ್ತವೆ. ಉದಾ: ಇಥಿಯೋಪಿಯಾ (ಶೇ. 32.8), ಲೆಬೆನಾನ್ (ಶೇ. 59.7)
- 60 ಶೇ. ಜನಸಂಖ್ಯೆಯಾದಂತೆ ಶರಿಯಾ ಕಾನೂನನ್ನು ತಮ್ಮ ಬಲವಾದ ಆಯುಧವನ್ನಾಗಿ ಮಾಡಿಕೊಳ್ಳುತ್ತಾರೆ, ತಮ್ಮನ್ನು ಬಿಟ್ಟು ಉಳಿದವರ ಮೇಲೆ ದಾಳಿ, ನಡೆಸಿ ಭಯದ ವಾತಾವರಣವನ್ನು ಸೃಷ್ಟಿ ಮಾಡುತ್ತಾರೆ. ಉದಾಹರಣೆಗೆ ಅಲ್ಬೇನಿಯಾ, ಸುದಾನ್, ಮಲೇಷಿಯಾ, ಕತಾರ್ ಇತ್ಯಾದಿ
- ಇನ್ನು ಶೇ. 80 ರಿಂದ 90ಕ್ಕೆ ಏರಿತೆಂದು ತಿಳಿಯಿರಿ ಅರಾಜಕತೆಯ ತಾಂಡವದ ಪ್ರಾರಂಭ – ಬಾಂಗ್ಲಾದೇಶ, ಇಜಿಪ್ಟ್, ಸಿರಿಯಾ, ಇರಾಕ್, ಮಾರಕೋ, ಟರ್ಕಿ, ಪಾಲಿಸ್ತೀನ್, ಇಂಡೋನೇಷಿಯಾ, ಪಾಕಿಸ್ತಾನ್ ಇತ್ಯಾದಿ.
- ಹಾಗೆಂದು 100 ಕ್ಕೆ 100 ಮುಸ್ಲಿಮರು ಸುಸೂತ್ರವಾಗಿದ್ದಾರೆ ಎಂದು ನಂಬಿದರೆ ಅದೂ ದೊಡ್ಡ ಸುಳ್ಳು. ಇದು ದಾರ್–ಎ–ಸಲಾಮ್ ಅಂದರೆ ಸಂಪೂರ್ಣ ಇಸ್ಲಾಂ ರಾಷ್ಟ್ರ. ಆದರೆ ಇಲ್ಲಿಯೂ ನರಮೇಧ, ರಕ್ತಪಾತಗಳಿಗೇನೂ ಕೊರತೆಯಿಲ್ಲ. ಉದಾ: ಸೌದಿ ಅರೇಬಿಯಾ, ಸೊಮಾಲಿಯಾ, ಅಫಘಾನಿಸ್ತಾನ, ಯೆಮೆನ್.

## ಪರಿಹಾರಗಳೇನು?

ಭಾರತವನ್ನು ಇಸ್ಲಾಮೀಕರಣದಿಂದ ತಪ್ಪಿಸಬೇಕಾದರೆ ಅನೇಕ ತುರ್ತುಕ್ರಮಗಳ ಅವಶ್ಯಕತೆ ಇದೆ.

1. ಇಡೀ ದೇಶಕ್ಕೆ ಅನ್ವಯವಾಗುವಂತೆ ಏಕರೂಪ ಕಾನೂನು ಸಂಹಿತೆಯನ್ನು ಕೂಡಲೇ ಜಾರಿಗೊಳಿಸಬೇಕು.
2. ಕುಟುಂಬ ಯೋಜನೆಯನ್ನು ಎಲ್ಲರಿಗೂ ಸಮಾನವಾಗಿ ಅನ್ವಯವಾಗುವಂತೆ ಜಾರಿಗೊಳಿಸಬೇಕು.
3. ಅತ್ಯಂತ ಕಟ್ಟುನಿಟ್ಟಿನ ಗಡಿ ರಕ್ಷಣೆಯನ್ನು ಮಾಡಿ ಅಕ್ರಮ ವಲಸೆಯನ್ನು ತಪ್ಪಿಸಬೇಕು.
4. ಸಂವಿಧಾನದ 370ನೇ ವಿಧಿಯನ್ನು ರದ್ದುಗೊಳಿಸಿ, ಜಮ್ಮು–ಕಾಶ್ಮೀರ ರಾಜ್ಯವನ್ನು ಎಲ್ಲಾ ದೇಶವಾಸಿಗಳಿಗೂ ಮುಕ್ತಗೊಳಿಸಬೇಕು.
5. ಆಮಿಷದ, ಬಲಾತ್ಕಾರದ ಮತಾಂತರವನ್ನು ಗಂಭೀರ ಅಪರಾಧವೆಂದೇ ಪರಿಗಣಿಸಿ ಕಠಿಣ ಶಿಕ್ಷೆ ವಿಧಿಸಬೇಕು.

## ಜಾಗೃತಿಯೆಡೆಗೆ ಜನಗಣತಿ

ಮೇಲ್ಕಂಡ ಅಂಶಗಳೆಲ್ಲವೂ ಸರ್ಕಾರ ಅಥವಾ ಪ್ರಭುತ್ವ ಮಾಡಬೇಕಿರುವ ಕೆಲಸಗಳು ಎಂದು ಸುಮ್ಮನಿರುವುದರಿಂದ ಅಪಾಯ ಕಟ್ಟಿಟ್ಟ ಬುತ್ತಿ. ದೇಶದ ಸಾಮಾನ್ಯ ಹಿಂದೂವು ಇಸ್ಲಾಮೀಕರಣದ ವಿರುದ್ಧ ಹೋರಾಡಬೇಕು. ಇದು ಅನಿವಾರ್ಯ. ಪ್ರತಿ ಹಿಂದು ಕುಟುಂಬವೂ ಕನಿಷ್ಠ ಮೂರು ಮಕ್ಕಳನ್ನು ಪಡೆಯದಿದ್ದರೆ ಮುಂದಿನ ಶತಮಾನದಲ್ಲಿ ಎಣಿಸಲಿಕ್ಕೂ ಹಿಂದುಗಳು ಸಿಗಲಿಕ್ಕಿಲ್ಲ.

2011ರ ಜನಗಣತಿ ನಮಗೊಂದು ಎಚ್ಚರಿಕೆಯ ಗಂಟೆಯಾಗಿದೆ. ಭಾರತ ತನ್ನ ಸನಾತನ ಸಂಸ್ಕೃತಿಯನ್ನು, ಏಕತೆಯನ್ನು, ಹಿಂದೂ ಧರ್ಮವನ್ನೂ ಉಳಿಸಿಕೊಳ್ಳಲು ಜಾಗೃತಗೊಳ್ಳುವುದು ಅನಿವಾರ್ಯ. ಇಲ್ಲದಿದ್ದರೆ ಇನ್ನು 50 ವರ್ಷಗಳ ನಂತರ ಅಖಂಡ ಭಾರತದ ಕೂಗು ಮುಸಲ್ಮಾನರಿಂದಲೇ ಕೇಳಿ ಬಂದೀತು. ಅಲ್ಲಿ ಹಿಂದುಗಳೇ ಅಲ್ಪಸಂಖ್ಯಾತರಾಗುತ್ತಾರೆ. 'ಹೋರಾಡಿ ಪಡೆದೆವು ಪಾಕಿಸ್ತಾನ, ನಗುತಾ ಪಡೆವೆವು ಹಿಂದೂಸ್ಥಾನ' ಎಂಬ ಜಿಹಾದಿಗಳ ಘೋಷಣೆ ಈಗಾಗಲೇ ಕೇಳಿಬರುತ್ತಿದೆ. ಮುಸಲ್ಮಾನಬಾಹುಳ್ಯದ ಪ್ರದೇಶಗಳಲ್ಲಿ ಹಿಂದುಗಳ ಸ್ಥಿತಿ ಏನಾದೀತೆಂಬ ಅರಿವು ನಮಗಿದ್ದೇ ಇದೆ. ಪಾಕಿಸ್ತಾನ, ಬಾಂಗ್ಲಾದೇಶಗಳ ಹಿಂದುಗಳ ಕತೆ ನಮಗೆ ಗೊತ್ತಿದೆಯಷ್ಟೇ. ಈ ಹಿನ್ನೆಲೆಯಲ್ಲಿ ಹಿಂದುಗಳ ಎಚ್ಚೆತ್ತುಕೊಳ್ಳಬೇಕಾದ ಅನಿ ವಾರ್ಯ ಪರಿಸ್ಥಿತಿ ಇಂದು ಎದುರಾಗಿದೆ.

*– ಸಂತೋಷ್ ಜಿ ಆರ್, 9591994643*

# ರೈತರೇ ನಿರ್ಮಿಸಿದ ಬ್ಯಾರೇಜಿಗೆ 25 ವರ್ಷ



ಅದು ಬಾಗಲಕೋಟೆಯ ಚಿಕ್ಕಪಡಸಲಗಿ. 1987ರಲ್ಲಿ ತೀವ್ರ ನೀರಿನ ಸಮಸ್ಯೆ ಎದುರಾದಾಗ ಚಿಕ್ಕಪಡಸಲಗಿ ಬಳಿ ಬ್ಯಾರೇಜ್ ನಿರ್ಮಿಸುವಂತೆ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿದ್ದ ವೇಳೆ ಹಲವು ಬಾರಿ ಸರಕಾರವನ್ನು ಬೇಡಿಕೊಂಡರು. ಸರ್ಕಾರ ಸ್ಪಂದಿಸದ ಹಿನ್ನೆಲೆಯಲ್ಲಿ ಜನರಲ್ಲಿ ತಾವೇ ಯಾಕೆ ಈ ಕಾರ್ಯಕ್ಕೆ ಮುಂದಾಗಬಾರದು ಎಂಬ ಯೋಚನೆ ಮೂಡಿತು. ಎಲ್ಲರೂ ಸೇರಿ ಸಿದ್ದು ನ್ಯಾಮಗೌಡ ಎಂಬವರ ನೇತೃತ್ವದಲ್ಲಿ 'ಕೃಷ್ಣಾ ತೀರ ರೈತ ಸಂಘ' ಕಟ್ಟಿಕೊಂಡು ಮನೆ ಮನೆಗೆ ತೆರಳಿ ನೆರವು ನೀಡುವಂತೆ ಮನವಿ ಮಾಡಿದರು. ಮನವಿಗೆ ಸ್ಪಂದಿಸಿದ ಊರ ಜನರು ಈ ಕೆಲಸಕ್ಕೆ ಕೈಜೋಡಿಸಿದರು. ನಂತರ ನಡೆದದ್ದು, ರಾಷ್ಟ್ರಕ್ಕೆ ಮಾದರಿ ಕಾರ್ಯ. ಭವಿಷ್ಯದ ಬಗ್ಗೆ ಸ್ಪಷ್ಟ ದೃಷ್ಟಿ ಕಂಡುಕೊಂಡ ಊರಿನ ಪ್ರತಿಯೊಬ್ಬ ರೈತರೂ ಈ ಕಾರ್ಯಕ್ಕೆ ಕೈಜೋಡಿಸಿ 15,000 ರೂಪಾಯಿ ನೀಡಲು ಮುಂದೆ ಬಂದರು. ಸುಮಾರು 4 ಸಾವಿರ ರೈತರು ಸೇರಿ, ಕೇವಲ 94 ಲಕ್ಷ ರೂಪಾಯಿ ಹಣದಲ್ಲಿ 11 ತಿಂಗಳ ಅವಧಿಯಲ್ಲಿ ಚಿಕ್ಕಪಡಸಲಗಿ ಬ್ಯಾರೇಜ್ ಕಟ್ಟಿ ದಾಖಲೆ ನಿರ್ಮಿಸಿದರು. ಆರಂಭದಲ್ಲಿ 35ಸಾವಿರ ಎಕರೆಗೆ ನೀರು ಪೂರೈಸುತ್ತಿದ್ದ ಈ ಬ್ಯಾರೇಜ್ ದೇಶದಲ್ಲಿಯೇ ರೈತರಿಂದ ನಿರ್ಮಾಣವಾದ ಮೊದಲ ಬ್ಯಾರೇಜ್ ಎಂಬ ಖ್ಯಾತಿಗೆ ಪಾತ್ರವಾಗಿದೆ. 25ವರ್ಷದ ಸಂಭ್ರಮದಲ್ಲಿರುವ ಈ ಬ್ಯಾರೇಜ್‌ಗೆ ಇದೀಗ ಅದೇ ರೈತರು ಎಂಟು ಕೋಟಿ ಖರ್ಚು ಮಾಡಿ 1.5 ಮೀಟರ್ ಎತ್ತರಿಸುವ (ಬ್ಯಾರೇಜ್‌ನ ಒಟ್ಟು ಎತ್ತರ 9.75 ಮೀ.) ಜತೆಗೆ ಆಲಮಟ್ಟಿ ಹಿನ್ನೀರು ಎತ್ತುವ ಕಾರ್ಯ ಕೈಗೊಂಡು ಯಶಸ್ವಿಯಾಗಿದ್ದಾರೆ. ಒಟ್ಟು 4.3 ಟಿಎಂಸಿ ಅಡಿ ನೀರು ಸಂಗ್ರಹವಗಿದ್ದು, 75 ಸಾವಿರ ಎಕರೆಗೆ ನೀರಾವರಿ ಒದಗಿಸುವುದರ ಜೊತೆಗೆ ಅಥಣಿ, ಜಮಖಂಡಿ ತಾಲೂಕಿನ 33 ಹಳ್ಳಿಗಳ 3 ಲಕ್ಷ ಜನರಿಗೆ ಕುಡಿಯುವ ನೀರು ಪೂರೈಸಲಾಗುತ್ತಿದೆ. ರೈತರೇ ತಮ್ಮ ಸ್ವಂತ ಹಣ, ಶ್ರಮದ ಮೂಲಕ ಇಂತಹವೊಂದು ಯೋಜನೆ ರೂಪಿಸಿ, ನಿರ್ಮಿಸಿದ್ದಾರೆ. ಊರಿನ ಎಲ್ಲ ಸಮಸ್ಯೆಗಳಿಗೂ ಸರಕಾರವನ್ನೇ ಎದುರು ನೋಡುವ ಇಂದಿನ ಪರಿಸ್ಥಿತಿಯಲ್ಲಿ ತಮ್ಮೂರಿನ ಅಗತ್ಯವನ್ನು ಪೂರೈಸಿಕೊಳ್ಳಲು ಮುಂದಾದ ಈ ರೈತರು ದೇಶಕ್ಕೇ ಮಾದರಿಯಾಗಿದ್ದಾರೆ.

# ಎಟಿಎಂ : ಇಲ್ಲಿ 20 ಪೈಸೆಗೆ 1 ಲೀಟರ್ ನೀರು!



ಭಾರತೀಯ ಜೀವನ ಪದ್ಧತಿಯಲ್ಲಿ ನೀರು ಪ್ರಮುಖ ಪಾತ್ರವಹಿಸುತ್ತದೆ. ಇನ್ನು ಸ್ವಚ್ಛ ಕುಡಿಯುವ ನೀರಿನ ಪೂರೈಕೆ ಭಾರತದಂತ ದೇಶದಲ್ಲಿ ಕಠಿಣ ಸವಾಲೇ. ಬಾಲ್ಯದಿಂದಲೂ ಈ ಕುಡಿಯುವ ನೀರಿನ ಯಾತನೆಯನ್ನು ಅನುಭವಿಸಿದ ಆಂಧ್ರ ಪ್ರದೇಶದ ಕರುಣಾಕರ ರೆಡ್ಡಿ 'ಸ್ಮಾಟ್' ಎಂಬ ಹೆಸರಿನಲ್ಲಿ ಒಂದು ಪ್ರಕಲ್ಪ ಪ್ರಾರಂಭಿಸಿ ಕುಡಿಯುವ ನೀರಿನ ಅಭಾವವಿರುವ ಹಳ್ಳಿಗಳಿಗೆ ನೀರನ್ನು ಒದಗಿಸಲು ಮುಂದಾಗಿದ್ದಾರೆ. ಇದನ್ನು ನೀರಿನ ಎಟಿಎಂ ಅಂತಲೇ ಕರೆಯುತ್ತಾರೆ. 20 ಪೈಸೆಗೆ ಒಂದು ಲೀಟರ್ ನಂತೆ ಎಟಿಎಂನಿಂದ ಸ್ವಚ್ಛ ನೀರನ್ನು ಕೊಂಡುಕೊಳ್ಳಬಹುದು. ಕರುಣಾಕರ ರೆಡ್ಡಿಯವರ ಪ್ರಕಾರ ಯಂತ್ರಗಳನ್ನು ಬಳಸಿ ಸಾಧಾರಣವಾಗಿ ಸಿಗುವ ನೀರನ್ನು ಕುಡಿಯುವ ನೀರನ್ನಾಗಿ ಪರಿವರ್ತಿಸಲು ತಗಲುವ ವೆಚ್ಚ 15 ಪೈಸೆ. 5 ಪೈಸೆ ನಿರ್ವಹಣಾ ವೆಚ್ಚಕ್ಕೆಂದು ನಿಗದಿಪಡಿಸಿ ಮಾರಾಟಮಾಡುವ ಸ್ಮಾಟ್ ಸಂಸ್ಥೆ ಈವರೆಗೆ 2800 ಎಟಿಎಂಗಳನ್ನು 11 ರಾಜ್ಯಗಳಲ್ಲಿ ನಿರ್ಮಿಸಿದೆ. ಈ ಎಟಿಎಂಗಳನ್ನು ತಯಾರಿಸುವ ಖರ್ಚನ್ನು ಹಲವು ಕಡೆಗಳಲ್ಲಿ ಸ್ಥಳೀಯ ಶಾಸಕರು ತೆಗೆದುಕೊಂಡಿದ್ದಾರೆ. ಜೊತೆಗೆ ಸಾಧಾರಣ ನೀರಿನ ಗುಣಮಟ್ಟ ಚೆನ್ನಾಗಿದ್ದಲ್ಲಿ ಶೇ. 80 ರಷ್ಟು ಕುಡಿಯುವ ನೀರು ಲಭಿಸುತ್ತದೆಂದು ಉಳಿದ ನೀರನ್ನು ಇತರ ಕೆಲಸಗಳಿಗೆ ಬಳಸಿಕೊಳ್ಳಬಹುದಾಗಿದೆ ಎಂದು ಅಂದಾಜು ಮಾಡಲಾಗಿದೆ.

# ದೇಶಸೇವೆಗಾಗಿ 374 ಸೈನಿಕರಿಗೆ ಸೇವಾ ಪ್ರಶಸ್ತಿ



ದೇಶ ರಕ್ಷಣೆಗಾಗಿ ಜೀವವನ್ನೇ ಪಣತೊಟ್ಟು ಕಾರ್ಯ ನಿರ್ವಹಿಸುತ್ತಿರುವ ಸೇನಾಪಡೆಯ 374 ಸೈನಿಕರಿಗೆ ಸೇವಾ ಪ್ರಶಸ್ತಿಗಳನ್ನು ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಪ್ರದಾನ ಮಾಡಿದರು. ಲೆಫ್ಟಿನೆಂಟ್ ಕರ್ನಲ್ ಸಂಕಲ್ಪ ಕುಮಾರ್ ಅವರಿಗೆ ಶೌರ್ಯ ಚಕ್ರ (ಮರಣೋತ್ತರವಾಗಿ) ಸೇರಿದಂತೆ ಒಬ್ಬರಿಗೆ ಅಶೋಕ ಚಕ್ರ (ನಾಯಕ ನೀರಜ್ ಕುಮಾರ್ ಅವರಿಗೆ ಅಶೋಕ ಚಕ್ರ), ಮೂವರಿಗೆ ಕೀರ್ತಿ ಚಕ್ರ (ಕ್ಯಾಪ್ಟನ್ ಜೈದೇವ್, ಸುಬೇದಾರ್ ಕೋಶ್ ಬಹಾ ದೂರ್ ಗುರುಂಗ್ ಹಾಗೂ ಸುಬೇದಾರ್ ಅಜಯ್‌ವರ್ಧನ್), 12 ಮಂದಿಗೆ ಶೌರ್ಯ ಪ್ರಶಸ್ತಿ (ಲೆಫ್ಟಿನೆಂಟ್ ಕರ್ನಲ್ ಸಂಕಲ್ಪ ಕುಮಾರ್ ಅವರಿಗೆ ಮರಣೋತ್ತರವಾಗಿ), 48 ಸೇನಾ ಶೌರ್ಯ, 11 ವಾಯುಸೇನೆ, 28 ಪರಮ ವಿಶಿಷ್ಟ ಸೇವಾ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.

पुंगव PUNGAVA
# 74, Ranga Rao Road,
Shankarapuram, Bangalore - 560 004.
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALOURU/ GPO on 10/25 of every Month REG.NO.CPMG/KA/BGS/102/2015-17
15-2-2015



# ವೈಶ್ವಿಕ ಯೋಗಕ್ಷೇಮಕ್ಕಾಗಿ ವಿಶ್ವದ ಪ್ರಾಚೀನ ಸಂಸ್ಕೃತಿಗಳ ಸಮಾಗಮ

## ಮೈಸೂರಿನಲ್ಲಿ ಸಂಪನ್ನಗೊಂಡ ವಿಶ್ವದ ಪ್ರಾಚೀನ ಸಂಪ್ರದಾಯಗಳ ಐದನೇ ಅಂತರರಾಷ್ಟ್ರೀಯ ಸಮ್ಮೇಳನ ಮತ್ತು ಹಿರಿಯರ ಕೂಟ

ವೈಶ್ವಿಕ ಯೋಗಕ್ಷೇಮ – ಪ್ರಕೃತಿ, ಸಂಸ್ಕೃತಿ ಮತ್ತು ಸಮುದಾಯಗಳನ್ನು ಉಳಿಸುವುದು (Universal Wellbeing – Sustaining Nature, Culture and Communities) ಎನ್ನುವ ಘೋಷವಾಕ್ಯದೊಂದಿಗೆ ವಿಶ್ವದ ಪ್ರಾಚೀನ ಸಂಪ್ರದಾಯಗಳ ಐದನೇ ಅಂತಾರಾಷ್ಟ್ರೀಯ ಸಮ್ಮೇಳನ ಮತ್ತು ಹಿರಿಯರ ಕೂಟ (International Conference and Gathering of Elders) ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಆವರಣದಲ್ಲಿ ಇತ್ತೀಚೆಗೆ ಜರುಗಿತು. ಐದು ದಿನಗಳ ಕಾಲ ನಡೆದ ಈ ಸಮ್ಮೇಳನದಲ್ಲಿ ಮೂವತ್ತೈದು ದೇಶಗಳ ವಿವಿಧ ಪ್ರಾಚೀನ ಸಂಸ್ಕೃತಿಗಳ ಇನ್ನೂರೈವತ್ತಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಂಡರು.

ಸಮಾರಂಭದಲ್ಲಿ ಗ್ವಾಟೆಮಾಲಾ ದೇಶದ ಮಾಯಾ ಸಂಸ್ಕೃತಿ, ಲಿಥುಯಾನಿಯಾದ ರೋಮುವಾ ಸಂಸ್ಕೃತಿ, ಹಂಗೇರಿಯಾ ಪ್ರಾಚೀನ ಸಂಪ್ರದಾಯ, ಜರ್ಮನಿಯ ಕ್ರಿಶ್ಚಿಯನ್ ಪೂರ್ವ ಅಸಾತ್ರು ಸಂಸ್ಕೃತಿ, ಅಮೆರಿಕದ ಚೆರೊಕೆ ಸಂಪ್ರದಾಯ, ಕಿರ್ಗಿಸ್ತಾನದ ಐಗನ್ ಸಂಪ್ರದಾಯ, ಇಂಗ್ಲೆಂಡಿನ ಡ್ರುಯ್ಡ್ ಸಂಪ್ರದಾಯ, ಹಂಗೇರಿಯದ ಪ್ರಾಚೀನ ಸಂಸ್ಕೃತಿಯ ಪ್ರತಿನಿಧಿಗಳು, ಇರಾಕಿನ ಯೆಜಿದಿ ಸಂಪ್ರದಾಯ, ಜಪಾನಿನ ಪ್ರಾಚೀನ ಸಂಪ್ರದಾಯ, ಕೆನ್ಯಾ ದೇಶದ ಸ್ಥಾನಿಕ ಸಂಸ್ಕೃತಿ, ನೈಜಿಲ್ಯಾಂಡ್ ದೇಶದ ಮೂಲ ಸಂಸ್ಕೃತಿ, ಛತ್ತೀಸ್‌ಗಢದ ಗೊಂಡ ಸಂಪ್ರದಾಯ, ನೇಪಾಲದ ಪುರಾತನ ಸಂಸ್ಕೃತಿ, ಅರುಣಾಚಲ ಪ್ರದೇಶದ ಸ್ಥಾನಿಕ ಪದ್ಧತಿ ಮೊದಲಾದ ಒಟ್ಟು ಇಪ್ಪತ್ತೂರು ಸಂಪ್ರದಾಯಗಳ ಪ್ರತಿನಿಧಿಗಳು ಭಾಗವಹಿಸಿ, 'ಮ್ಮ ಸಂಸ್ಕೃತಿಯ ವಿಶೇಷತೆಯನ್ನು ಪರಿಚಯಿಸಿ ವೈಶ್ವಿಕ ಶಾಂತಿಯನ್ನು ಕೋರಿ ತಮ್ಮತಮ್ಮ ಪದ್ಧತಿಯಂತೆ ಪ್ರಾರ್ಥನೆಯನ್ನು ಪ್ರಸ್ತುತಪಡಿಸಿದರು.



ಮೈಸೂರಿನಲ್ಲಿ ನಡೆದ ಐಸಿಸಿಎಸ್‌ನ 5ನೇ ಅಂತರರಾಷ್ಟ್ರೀಯ ಸಮ್ಮೇಳನವನ್ನು ಆರೆಸ್ಸೆಸ್‌ನ ಸರಸಂಘಚಾಲಕ ಮೋಹನ್ ಭಾಗವತ್ ಉದ್ಘಾಟಿಸಿದರು.

ಸಮ್ಮೇಳನದ ಆರಂಭದಲ್ಲಿ ಮೈಸೂರಿನ ಬೀದಿಗಳಲ್ಲಿ ನಡೆದ ವರ್ಣರಂಜಿತ ಶೋಭಾಯಾತ್ರೆಯಲ್ಲಿ ಎಲ್ಲ ಪ್ರತಿನಿಧಿಗಳು ತಮ್ಮ ಸಾಂಪ್ರದಾಯಿಕ ಉಡುಗೆಗಳಲ್ಲಿ ಪಾಲ್ಗೊಂಡರು. ಶೋಭಾಯಾತ್ರೆಯು ವಿವಿಧ ದೇಶಗಳ ಪ್ರಾಚೀನ ಸಂಪ್ರದಾಯಗಳ ಪದ್ಧತಿ ಆಚಾರ ಉಡುಗೆಗಳನ್ನು ಬಿಂಬಿಸುವುದರ ಜೊತೆಗೆ ವಿಶ್ವದ ವೈವಿಧ್ಯತೆಯ ಶ್ರೀಮಂತಿಕೆಯನ್ನೂ ಅನಾವರಣಗೊಳಿಸಿತು.

### ಮಾತೃಸ್ಥಾನದಲ್ಲಿ ಭಾರತ

ಸಮ್ಮೇಳನದಲ್ಲಿ ಪಾಲ್ಗೊಂಡ ವಿಶ್ವದ ವಿವಿಧ ಸಂಸ್ಕೃತಿಗಳ ಸಂಪ್ರದಾಯಗಳ ಜನರು ಭಾರತವನ್ನು ತಾಯಿಯ ಸ್ಥಾನದಲ್ಲಿ ಕಾಣುತ್ತಿರುವುದು ಸ್ಪಷ್ಟವಾಗಿ ಗೋಚರವಾಯಿತು. ಬಹುತೇಕ ಎಲ್ಲ ಪ್ರಾಚೀನ ಸಂಪ್ರದಾಯದ ಜನರೂ ಪ್ರಕೃತಿಯ ಆರಾಧಕರಾಗಿದ್ದು ಅವರ ಪೂಜಾ ಪದ್ಧತಿ, ಪ್ರಾರ್ಥನೆಗಳು ಭಾರತೀಯ ಪದ್ಧತಿಯೊಡನೆ ಸಾಮ್ಯತೆಯನ್ನು ಹೊಂದಿವೆ. ಉದಾಹರಣೆಗೆ ಹಂಗೇರಿಯ ಮೂಲಸಂಸ್ಕೃತಿಯ ಪ್ರತಿನಿಧಿಯೊಬ್ಬರು ಅನೌಪಚಾರಿಕ ಚರ್ಚೆಯಲ್ಲಿ ತಮ್ಮ ಪೂರ್ವಜರ ಮೂಲವನ್ನು ಶೋಧಿಸಿದಾಗ ತಾವು ಬಿಹಾರದ ಬುಡಕಟ್ಟಿನ ವಂಶಜರೆಂದು ಕಂಡುಬಂದ ಆಸಕ್ತಿಕರ ವಿಷಯವನ್ನು ತಿಳಿಸಿದರು. ಕೆಲವೇ ಕೆಲವು ಜನಸಂಖ್ಯೆಯಿರುವ ಈ ಸಂಪ್ರದಾಯಗಳ ಜನರು ಇಸ್ಲಾಂ ಮತ್ತು ಕ್ರಿಶ್ಚಿಯಾನಿಟಿಗಳ ಅಸಹಿಷ್ಣುತೆಯಿಂದಾಗಿ ತಮ್ಮ ಸಂಸ್ಕೃತಿಗೊದಗಿರುವ ಭೀತಿಯಿಂದ ಪಾರುಮಾಡಲು ಭಾರತದ ಸಹಾಯವನ್ನು ಬಯಸುತ್ತಿವೆ. ಸಮ್ಮೇಳನದಲ್ಲಿ ಭಾಗವಹಿಸಿದ್ದ ವ್ಯಾಪಕ ದೌರ್ಜನ್ಯಕ್ಕೊಳಗಾದ ಇರಾಕಿನ ಯಾಜಿದಿ ಸಂಪ್ರದಾಯದ ಪ್ರತಿನಿಧಿಗಳು ಪೂಜನೀಯ ಸರಸಂಘಚಾಲಕ ಮೋಹನ ಭಾಗವತರಲ್ಲಿ ತಮ್ಮ ಅಳಲನ್ನು ತೋಡಿಕೊಂಡರು. ಸಮ್ಮೇಳನದಲ್ಲಿ ಯಾಜಿದಿಗಳ ಹೋರಾಟಕ್ಕೆ ಸಂಪೂರ್ಣ ಬೆಂಬಲ ವ್ಯಕ್ತವಾಯಿತು.

### ಅಂತಾರಾಷ್ಟ್ರೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರ (ಐಸಿಸಿಎಸ್)

ವಿಶ್ವದ ಅತಿ ಪ್ರಾಚೀನ ಅಥವಾ ಪುರಾತನ ಸಂಸ್ಕೃತಿಗಳ ಪ್ರತಿನಿಧಿಗಳು ಮತ್ತು ಹಿರಿಯರನ್ನು ಒಂದೆಡೆ ಸೇರಿಸಿ ಅಂತಹ ಸಂಪ್ರದಾಯಗಳ ಉಳಿವಿನ ಕುರಿತು ಚಿಂತನೆ ನಡೆಸುವ ಈ ಸಮ್ಮೇಳನವನ್ನು ಆರೆಸ್ಸೆಸ್‌ನಿಂದ ಪ್ರೇರಣೆ ಪಡೆದ ಅಮೆರಿಕದಲ್ಲಿನ ಅಂತಾರಾಷ್ಟ್ರೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರ (International Centre for Cultural Studies) ಆಯೋಜಿಸಿತು. ಮೊದಲನೆಯ ಸಮ್ಮೇಳನವು 2003ರಲ್ಲಿ ನಡೆದಿದ್ದು, ನಾಲ್ಕನೇ ಸಮ್ಮೇಳನವು 2012ರಲ್ಲಿ ಹರಿದ್ವಾರದಲ್ಲಿ ಜರುಗಿತ್ತು. ಇದೀಗ ಐದನೇ ಸಮ್ಮೇಳನವು ಮೈಸೂರಿನಲ್ಲಿ ಯಶಸ್ವಿಯಾಗಿ ಸಂಪನ್ನಗೊಂಡಿದೆ. ಈ ಸಮ್ಮೇಳನವು ವರ್ಷದಿಂದ ವರ್ಷಕ್ಕೆ ಐಸಿಸಿಎಸ್‌ನ ಪ್ರಯತ್ನದಿಂದಾಗಿ ವಿಶ್ವದ ಪ್ರಾಚೀನ ಆಚಾರಗಳ ವೈವಿಧ್ಯತೆಗಳನ್ನು ಉಳಿಸಿ, ಸಂಪ್ರದಾಯಗಳ ನಡುವೆ ಸಾಮರಸ್ಯ ಸಾಧಿಸುವ ಅಗತ್ಯದ ಕುರಿತು ಹೆಚ್ಚುತ್ತಿರುವ ಜಾಗೃತಿಯನ್ನು ಪ್ರದರ್ಶಿಸಿತು. ಐಸಿಸಿಎಸ್ ಸಂಸ್ಥೆಯು ಪ್ರಾಚೀನ ಸ್ಥಾನಿಕ ಪರಂಪರೆ ಮತ್ತು ಸಂಪ್ರದಾಯಗಳ ಸ್ವಾಭಾವಿಕ ಜ್ಞಾನದ ಮೌಲ್ಯವನ್ನು ಅರಿತು ಅದರ ಆಧಾರದ ಮೇಲೆ ಸಮುದಾಯಗಳನ್ನು ಬಲಪಡಿಸಿ ವೈಶ್ವಿಕ ಮಾನವ ಜೀವನವನ್ನು ಶ್ರೀಮಂತಗೊಳಿಸುವ ವಿಷಯದ ಕುರಿತು ಸಂಶೋಧನೆ, ಪ್ರತಿಪಾದನೆ ಮತ್ತು ಕಾರ್ಯಗತಗೊಳಿಸುವ ಪ್ರಯತ್ನದಲ್ಲಿ ಅನೇಕ ವರ್ಷಗಳಿಂದ ತೊಡಗಿದೆ.

### ಮೋಹನ ಭಾಗವತ್ ಅವರ ದಿಕ್ಸೂಚಿ ಭಾಷಣದ ಸಾರಾಂಶ


- ಪ್ರಪಂಚದ ಎಲ್ಲ ವಿಷಯಗಳ ನಡುವೆ ಅಂತರ್–ಸಂಬಂಧವಿದೆ. ಒಂದು ಇನ್ನೊಂದರ ಮೇಲೆ ಪ್ರಭಾವ ಬೀರುತ್ತವೆ. ಪ್ರಾಚೀನ ಸಂಪ್ರದಾಯಗಳು ಗುರುತಿಸಿದ್ದ ಈ ಗುಣವನ್ನು ಆಧುನಿಕ ವಿಜ್ಞಾನ ದೃಢಪಡಿಸಿದೆ. ವಿಶ್ವದ ಒಂದು ಪ್ರದೇಶದಲ್ಲಿ ನಡೆಯುವ ಘಟನೆ ದೂರದ ಇನ್ನೊಂದು ಪ್ರದೇಶದಲ್ಲಿ ಪರಿಣಾಮ ತೋರಿಸುತ್ತದೆ. ಆದ್ದರಿಂದ ವೈಶ್ವಿಕ ವ್ಯಾಪ್ತಿ ಪಡೆಯದ ಹೊರತು ಯಾವುದೇ ಅನ್ಯ ಮಾರ್ಗವಿಲ್ಲ ಎಂದು ಪ್ರಪಂಚ ಇನ್ನೂ ಕಂಡುಕೊಳ್ಳಬೇಕಿದೆ.
- ವಿಶ್ವದಲ್ಲಿರುವ ವಿವಿಧತೆಯನ್ನು ನಾವು ಒಪ್ಪಿಕೊಳ್ಳಬೇಕು. ಏಕೆಂದರೆ ವೈವಿಧ್ಯತೆಯು ಜೀವಂತವಾಗಿರುವುದು ಬೇಡಿಕೆ–ಲಾಭ ಮುಂತಾದ ವ್ಯವಹಾರಿಕ ಕಾರಣದಿಂದಾಗಲ್ಲ. ವಿಶ್ವವು ನಿಂತಿರುವುದು ವಿವಿಧತೆಯಲ್ಲಿನ ಈ ಜೀವಂತ ಸಂಬಂಧವನ್ನು ಗುರುತಿಸುವ ಕಾರಣದಿಂದ ಮಾತ್ರ.
- ಸಹಿಷ್ಣುತೆ ಎನ್ನುವುದು ಆಧುನಿಕ ಜಗತ್ತಿನ ಹಕ್ಕಿನ ಕಲ್ಪನೆಯ ತತ್ವ. ಆದರೆ ಪ್ರಾಚೀನ ಸಂಪ್ರದಾಯಗಳು ನಮಗೆ ಕೇವಲ ಸಹಿಷ್ಣುತೆಯನ್ನಷ್ಟೇ ಅಲ್ಲ ಇನ್ನೊಬ್ಬರ ಸಂಪ್ರದಾಯವನ್ನು ಒಪ್ಪಿಕೊಳ್ಳಬೇಕೆಂಬ ತತ್ವವನ್ನೂ ಕಲಿಸುತ್ತವೆ.
- ವಿವಿಧತೆಯನ್ನು ಪೋಷಿಸಬೇಕೆ ಹೊರತು ವಿರೋಧಿಸಬಾರದು. ವಿವಿಧ ಉಡುಗೆ ತೊಡುಗೆ, ಸಂಪ್ರದಾಯ ಅಥವಾ ಪೂಜಾ ಪದ್ಧತಿಯ ಕಾರಣದಿಂದ ಯಾರನ್ನೂ ದೌರ್ಜನ್ಯಕ್ಕೊಳಪಡಿಸಬಾರದು.
- ವಿವಿಧ ಸಂಪ್ರದಾಯಗಳು ಒಟ್ಟಿಗೆ ಬರುವುದು ವಿಶ್ವದ ಒಳಿತಿನ ಕಾರ್ಯಕ್ಕೆ ಮೂಲವಾಗಬಲ್ಲದು. ಇಲ್ಲಿ ಆರಂಭಗೊಂಡಿರುವ ಹಿರಿಯರ ಸಭೆಯು ವಿಶ್ವದ ಒಳಿತಿನ್ನು ಸಾಧಿಸುವ ವಿಚಾರವನ್ನು ಕಾರ್ಯಗತಗೊಳಿಸುವತ್ತ ಮುನ್ನಡೆಯಲಿ.
- ವಿಶ್ವದ ಪ್ರಾಚೀನ ಸಂಪ್ರದಾಯಗಳ ಉಳಿವಿಗೆ ಭಾರತೀಯ ಸನಾತನ ಧರ್ಮ ಎಂದೆಂದಿಗೂ ಸಂಪೂರ್ಣ ಸಹಕಾರವನ್ನು ನೀಡುತ್ತದೆ.

### ಹಿಂದೂಗಳೇ ಎಚ್ಚರ – ಹೆಚ್ಚುತ್ತಿದೆ ಲವ್ ಜಿಹಾದ್

ರಾಂಚಿಯ ಕಿಶೋರ್‌ಗಂಜ್‌ನ ರಾಷ್ಟ್ರೀಯ ಕ್ರೀಡಾಪಟು ತಾರಾ ಶಹದೇವ್‌ರ ಲವ್ ಜಿಹಾದ್ ಪ್ರಕರಣ ಇನ್ನೂ ಹಸಿಯಾಗಿರುವಾಗಲೇ ಮತ್ತೊಂದು ಪ್ರಕರಣ ದಾಖಲಾಗಿದೆ. ರಾಂಚಿಯ ಆರಕ್ಷಕ ಠಾಣೆಯಲ್ಲಿ 25 ವರ್ಷದ ಜಯಾ ಭಂಡಾರಿ, ಪತಿ ತನ್ನನ್ನು ಇಸ್ಲಾಮ್‌ಗೆ ಮತಾಂತರಗೊಳ್ಳಬೇಕು ಎಂದು ಅತಿಯಾಗಿ ಹಿಂಸಿಸುತ್ತಿದ್ದಾನೆ ಎಂದು ದೂರು ದಾಖಲಿಸಿದ್ದಾಳೆ. ಪಂಚತಾರಾ ಹೋಟೆಲ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಜಯಾ ಭಂಡಾರಿ, ಅದೇ ಹೋಟೇಲ್‌ನಲ್ಲಿ ಕೆಲಸ ಮಾಡುತ್ತಿದ್ದ ದಾನಿಶ್ ಅನ್ವರ್ ಪರಸ್ಪರ ಪ್ರೀತಿಸಲಾರಂಭಿಸಿದರು. ತಾನು ಯಾವುದೇ ಕಾರಣಕ್ಕೆ ಇಸ್ಲಾಮಿಗೆ ಮತಾಂತರ ಹೊಂದುವುದಿಲ್ಲ; ಹಿಂದೂವಾಗಿಯೇ ಉಳಿದುಕೊಳ್ಳುತ್ತೇನೆ ಎಂದಳು. ಇದಕ್ಕೆ ಸಮ್ಮತಿಸಿದ ದಾನಿಶ್, ತಾನು ಸೆಕ್ಯುಲರ್‌ವಾದಿ, ನನಗೆ ಎಲ್ಲರೂ ಒಂದೇ ಎಂದು ನಂಬಿಸಿ 2013ರ ಅಕ್ಟೋಬರ್‌ನಲ್ಲಿ ದೇವಸ್ಥಾನವೊಂದರಲ್ಲಿ ಮದುವೆಯಾದರು. ಆದರೆ ನಂತರ ನಡೆದದ್ದೇ ಬೇರೆ! ಹೆಸರನ್ನು ಝೋಯಾ ಅನ್ವರ್ ಎಂದು ಬದಾಯಿಸಿದ್ದು ಮಾತ್ರವಲ್ಲದೇ 'ನಿಕಾಹ್'ಗೆ ಒತ್ತಾಯಿಸಿ, ನಿರಂತರ ಹಿಂಸೆ ನೀಡಲಾರಂಭಿಸಿದ. ಇದರಿಂದ ಮನನೊಂದ ಆಕೆ ದೂರು ನೀಡಿದ್ದಾಳೆ. ಪರಿಸ್ಥಿತಿಯ ಅರ್ಥವಾಗುವಾಗ ಅನಾಹುತವೇ ಘಟಿಸಿಹೋಗಿತ್ತು. ಇದು ಕೇವಲ ಜಯಾ ಒಬ್ಬರ ಕಥೆಯಲ್ಲ. ಹದಿಹರೆಯದ ವಯಸ್ಸಿನಲ್ಲಿ ವಯೋಸಹಜ ಆಸಕ್ತಿಯ ಲಾಭ ಪಡೆದು ಮುಸಲ್ಮಾನ್ ಯುವಕರು ಕುತಂತ್ರಗಳಿಗೆ ಹಿಂದೂ ಹೆಣ್ಣುಮಕ್ಕಳನ್ನು ಈ ಜಾಲಕ್ಕೆ ಬೀಳಿಸುವ ವ್ಯವಸ್ಥಿತ ಪ್ರಯತ್ನ ನಡೆಯುತ್ತಲೇ ಇದೆ.

### ಮೇಳೈಸಿದೆ ಸಂಘ ಶಕ್ತಿ

**ಕಾಸರಗೋಡು**


ಕಾಸರಗೋಡಿನಲ್ಲಿ ಫೆಬ್ರವರಿ 1ರಂದು ನಡೆದ ಜಿಲ್ಲಾಮಟ್ಟದ ಗಣವೇಷದಾರಿ ಸ್ವಯಂಸೇವಕರ ಸಂಚಲನ 'ವಿಜಯ ಶಕ್ತಿ ಸಂಗಮ'ದಲ್ಲಿ ಸುಮಾರು 18,000 ಸ್ವಯಂಸೇವಕರು ಭಾಗವಹಿಸಿದ್ದರು.

**ಶಿವಮೊಗ್ಗ**


ಶಿವಮೊಗ್ಗ ಜಿಲ್ಲಾ ಆರೆಸ್ಸೆಸ್ ವತಿಯಿಂದ ಫೆಬ್ರವರಿ 1ರಂದು ನಡೆದ 'ಪರಿವರ್ತನ ಸಮಾವೇಶ'ದಲ್ಲಿ ಜಿಲ್ಲೆಯ ಸುಮಾರು 15,000 ಸ್ವಯಂಸೇವಕರು ಸಂಚಲನದಲ್ಲಿ ಭಾಗವಹಿಸಿದ್ದರು.

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : 9731264009 ಪ್ರಸರಣ: 97391 83021 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19